# ಅನಂತಪಥ

ANANTHKUMAR PRATISHTHANA




ಮದನ್ ದಾಸ್ ದೇವಿ

ಪುಟ 9 ನುಡಿ ನಮನ

ಸಂಪುಟ - 4 ಆಗಸ್ಟ್ - 2023 ಸಂಚಿಕೆ - 38


## ಶೈಕ್ಷಣಿಕ ವ್ಯವಸ್ಥೆಗೊಂದು ಅನಂತದರ್ಪಣ




ಅನಂತಕುಮಾರರ ನೇತೃತ್ವದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಕರ್ನಾಟಕದಲ್ಲಿ ಅನೇಕ ಸಾಮಾಜಿಕ ಮತ್ತು ಶೈಕ್ಷಣಿಕ ವಿಷಯಗಳನ್ನು ಎತ್ತಿಕೊಂಡು ಹೋರಾಟ ನಡೆಸಿತ್ತು. ಹೋರಾಟದ ಅಂಗವಾಗಿ 1987ರಲ್ಲಿ ಪರಿಷತ್ತು ಪ್ರಕಟಿಸಿದ "ಕರಾಳ ಪತ್ರ" ಆ ಕಾಲದಲ್ಲಿ ರಾಜ್ಯದ ಶೈಕ್ಷಣಿಕ ಪರಿಸ್ಥಿತಿಗೆ ಹಿಡಿದ ಭೂತಗನ್ನಡಿಯಾಗಿ ಇಡೀ ರಾಜ್ಯದಲ್ಲಿ ಸಂಚಲನ ಮೂಡಿಸಿತ್ತು. ಎಬಿವಿಪಿ ರಾಜ್ಯ ಕಾರ್ಯದರ್ಶಿಯಾಗಿದ್ದ ಶ್ರೀ ಅನಂತಕುಮಾರ್ ಈ ದಾಖಲೆಯ ಪ್ರತಿಯೊಂದೂ ಅಧ್ಯಾಯವನ್ನು ಅಚ್ಚುಕಟ್ಟಾಗಿ ಹೆಣೆದವರು. ಅದರೊಳಗಿನ ಪ್ರತಿಯೊಂದು ವಾಕ್ಯವೂ ಕನ್ನಡ ಭಾಷೆಯ ಮೇಲಿನ ಅವರ ಹಿಡಿತ ಮತ್ತು ಸೃಜನಶೀಲತೆಗೆ ಸಾಕ್ಷಿಯಾಗಿತ್ತು. ಚಿಕ್ಕ ಪುಸ್ತಕವಾದರೂ ಅಂದಿನ ಶೈಕ್ಷಣಿಕ ದುಃಸ್ಥಿತಿಯನ್ನು ಅಂಕಿಅಂಶಗಳ ಮೂಲಕ ಖಚಿತವಾಗಿ ಮಂಡಿಸಿತ್ತು.

ಈ ಕರಾಳಪತ್ರದ ಲಿಪಿಕಾರ ನಾನಾಗಿದ್ದೆ. ಒಂದು ವಾರ ಯಾರಿಗೂ ಸಿಗದೆ ಎಲ್ಲೆಲ್ಲೋ ಪಟ್ಟಾಗಿ ಕೂತು ಇದನ್ನು ಬರೆದಿದ್ದೆವು. ಬರೆಯುವುದು, ಚಾ ಕುಡಿಯುವುದು, ವಾಕಿಂಗ್ ಮಾಡುವುದು, ಜೋಕ್‌ಗಳನ್ನು ಹಂಚಿಕೊಳ್ಳುವುದು; ಬರೆದ ವಾಕ್ಯಗಳನ್ನು ಓದಿ ಓದಿ ಅಲ್ಲೇ ಸುಧಾರಿಸುವುದು ........ ನಿಜಕ್ಕೂ ಅನಂತಕುಮಾರ್ ಈ ಪುಸ್ತಕದ ಮೂಲಕ ನನಗೆ ವಾಕ್ಯರಚನೆಯ ಶಿಸ್ತನ್ನು ಕಲಿಸಿಕೊಟ್ಟರು. ಪ್ರಿಯ ಮಿತ್ರ, ಕಲಾವಿದ, ಬಿ. ದೇವರಾಜ್ ಬಿಡಿಸಿದ ಮುಖಪುಟ ಚಿತ್ರವನ್ನು ಡಿಎಂಎಂ ಟೈಪ್ ಫೌಂಡ್ರಿಯಲ್ಲಿ ಬ್ಲಾಕ್ ಮಾಡಿಸಿದ್ದೆ. ಸೈದ್ಧಾಂತಿಕವಾಗಿ ಎಬಿವಿಪಿಯನ್ನು ವಿರೋಧಿಸುವ ಪಿ. ಲಂಕೇಶ್, ತಮ್ಮ ಲಂಕೇಶ್ ಪತ್ರಿಕೆಯ ಒಂದು ಪುಟವನ್ನು ಕರಾಳಪತ್ರದ ಪ್ರಶಂಸೆಗೆ ಮೀಸಲಾಗಿರಿಸಿದ್ದುದು ವಿಶೇಷ. ವಸ್ತುನಿಷ್ಠವಾಗಿ ಶೈಕ್ಷಣಿಕ ಸನ್ನಿವೇಶವನ್ನು ವಿಶ್ಲೇಷಿಸುವ ಪ್ರಬುದ್ಧತೆಯೇ ಮಾಯವಾಗಿರುವ, ಶಿಕ್ಷಣವು ಕ್ಯಾಪಿಟೇಶನ್ - ಡೊನೇಶನ್‌ಗಳನ್ನು ಮೀರಿದ ಸರಕಾಗಿ, ಇಂಜಿನಿಯರಿಂಗ್ – ಮೆಡಿಕಲ್ ಬಿಡಿ, ನರ್ಸರಿಗೂ ಲಕ್ಷ ರೂ. ಕೊಡಬೇಕಾಗಿರುವ, ನರ್ಸಿಂಗ್ ಶಿಕ್ಷಣಕ್ಕೂ ಮೂರ್‍ನಾಲ್ಕು ಲಕ್ಷ ಬೆಲೆ ಇರುವ, ಡಿಗ್ರಿ ಪಡೆಯಲು ಕೇಳಿದಷ್ಟು ಹಣ ಕೊಡುವುದಕ್ಕೆ ಹಿಂದೆ ಮುಂದೆ ನೋಡದ ಪಾಲಕರೇ ತುಂಬಿರುವ ಈ ದಿನಗಳಲ್ಲಿ ಹೊಸದೊಂದು ಚಳವಳಿ, ಹೊಸದೊಂದು ಕರಾಳಪತ್ರದ ಅಗತ್ಯವಿದೆ.


**-ಬೇಳೂರು ಸುದರ್ಶನ**




**(ಮುಂಬರುವ ಸಂಚಿಕೆಗಳಲ್ಲಿ ' ಕರಾಳ ಪತ್ರ ' ದ ವಿವರಗಳನ್ನು ನಿರೀಕ್ಷಿಸಿ)**

## ಪಥಿಕರಿಗೆ ಪಥವಾದ 'ಪಥದರ್ಶಿ'

### ಪ್ರೊ. ಪಿ.ವಿ.ಕೃಷ್ಣಭಟ್ಟ ಅಭಿನಂದನಾ ಗ್ರಂಥ ಲೋಕಾರ್ಪಣೆ




ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಭಾರತೀಯ ಸ್ಕೌಟ್ಸ್ & ಗೈಡ್ಸ್ ಭವನದ ಸಭಾಂಗಣದಲ್ಲಿ 2023ರ ಆಗಸ್ಟ್ 5 ರಂದು ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಪ್ರೊ. ಪಿ.ವಿ. ಕೃಷ್ಣಭಟ್ಟರ ಕುರಿತಾದ "ಪಥದರ್ಶಿ" ಪುಸ್ತಕ ಬಿಡುಗಡೆಯಾಯಿತು. ಬಿಡುಗಡೆ ಸಮಾರಂಭದ ವೇದಿಕೆಯಲ್ಲಿ ದು.ಗು. ಲಕ್ಷ್ಮಣ, ಡಾ. ವಿಷ್ಣುಕಾಂತ ಚಟಪಲ್ಲಿ, ಡಾ. ಎ.ಡಿ.ಎನ್. ಬಾಜಪೇಯಿ, ರಾಜಕುಮಾರ್ ಭಾಟಿಯಾ, ಬಿ.ಎಸ್. ಯಡಿಯೂರಪ್ಪ, ವಿ. ಮುರಲೀಧರನ್, ದತ್ತಾತ್ರೇಯ ಹೊಸಬಾಳೆ, ಪಿ.ಜಿ.ಆರ್. ಸಿಂಧ್ಯಾ ಮತ್ತು ತೇಜಸ್ವಿನಿ ಅನಂತಕುಮಾರ್ ಉಪಸ್ಥಿತರಿದ್ದರು.

''ಪಥದರ್ಶಿ'' ಕೃತಿಯ ಸಂಪಾದಕರಾದ ದು.ಗು. ಲಕ್ಷ್ಮಣ, ಪ್ರೊ. ಪಿ.ವಿ. ಕೃಷ್ಣಭಟ್ಟರ ಅನೇಕ ಶಿಷ್ಯರು, ಸಂಬಂಧಿಕರು, ಸಮಕಾಲೀನರು ಬರೆದ ಲೇಖನಗಳನ್ನೊಳಗೊಂಡ ಪುಸ್ತಕವನ್ನು ಪರಿಚಯಿಸಿದರು. ಚ.ನ. ಶಂಕರರಾಯರು ಕೃಷ್ಣಭಟ್ಟರ ಜೊತೆಗಿನ ಸುದೀರ್ಘ ಒಡನಾಟವನ್ನು ಸ್ಮರಿಸಿಕೊಂಡರೆ, ಹಿರಿಯ ನೀರಾವರಿ ತಜ್ಞ ಎಂ.ಆರ್. ರಂಗನಾಥ ಅವರು ಕೃಷ್ಣಭಟ್ಟರು ಮಹದಾಯಿ ಹೋರಾಟದಲ್ಲಿ ವಹಿಸಿದ ಪಾತ್ರವನ್ನು ವಿವರಿಸಿದರು. ಶಿಕಾರಿಪುರದಲ್ಲಿ ತಮಗೆ ಪರಿಚಯವಾದ ಭಟ್ಟರು ಒಬ್ಬ ಶ್ರೇಷ್ಠ ಚಿಂತಕ ಎಂದು ಮಾಜಿ ಮುಖ್ಯಮಂತ್ರಿ, ಶ್ರೀ ಯಡಿಯೂರಪ್ಪ ಬಣ್ಣಿಸಿದರು. ತಾವು ಕೇರಳದ ಜೈಲಿನಲ್ಲಿದ್ದಾಗ ಕೃಷ್ಣಭಟ್ಟರು ಅಲ್ಲಿಗೇ ಬಂದು ತಮಗೆ ಧೈರ್ಯ ತುಂಬಿದ ವಿಷಯವನ್ನು ಕೇಂದ್ರ ಸಚಿವ ವಿ. ಮುರಲೀಧರನ್ ಹಂಚಿಕೊಂಡರು. ಕರ್ನಾಟಕ ಸರ್ಕಾರದ ಮಾಜಿ ಮಂತ್ರಿ ಪಿ.ಜಿ.ಆರ್. ಸಿಂಧ್ಯಾ, "ತಾವು ವಿಭಿನ್ನ ರಾಜಕೀಯ ವಿಚಾರಧಾರೆಯ ಕಡೆಗೆ ಹೊರಳಿದಾಗ ಕೂಡ ಕೃಷ್ಣಭಟ್ಟರು ಅದೇ ಪ್ರೀತಿಯಿಂದ ನಡೆಸಿಕೊಂಡರು; ಅದು ಅವರ ದೊಡ್ಡ ಗುಣ" ಎಂದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹರಾದ ದತ್ತಾತ್ರೇಯ ಹೊಸಬಾಳೆಯವರು ಮಾತನಾಡಿ, ಕೃಷ್ಣಭಟ್ಟರು ಅಪಘಾತವೊಂದರಲ್ಲಿ ಗಾಯಗೊಂಡು ಏಳಲು ಬಾರದೇ ಇರುವ ಪರಿಸ್ಥಿತಿಯಲ್ಲಿ ಕೂಡ ವಿದ್ಯಾರ್ಥಿ ಪರಿಷತ್ತಿನ ಬೈಠಕ್ಕಿನಲ್ಲಿ ಮಲಗಿಕೊಂಡೇ ಭಾಗವಹಿಸಿದ್ದನ್ನು ನೆನಪಿಸಿಕೊಂಡರು. "ಅವರದು ರಾಷ್ಟ್ರಕಾರ್ಯಕ್ಕೆ ಸಮರ್ಪಿತವಾದ ಜೀವನ. ಧ್ಯೇಯ ಪಥದಲ್ಲಿ ನಡೆಯುತ್ತ ನಡೆಯುತ್ತ ತಾವೇ ಪಥವಾದರು; "ರಾಹೀ ರಾಹ ಬನಗಯಾ" ಎಂದು ವರ್ಣಿಸಿದರು. ಪುಟ 4 ರಲ್ಲಿ ಮುಂದುವರೆದಿದೆ

**(ಪುಸ್ತಕ ಪರಿಚಯ ಪುಟ 7 ರಲ್ಲಿ)**

# ನಗರ್ತಪೇಟೆಯ ಹಲವು ಗುಡಿಗಳು

ದೇಗುಲದರ್ಶನ ಮಾಲಿಕೆ - 25









ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿರುವ ಹಳೆಯ ದೇವಾಲಯಗಳ ಸಂಖ್ಯೆಯೇ ಬೆರಗು ಮೂಡಿಸುವಂತಿದೆ. ಈ ಪುರಾತನವೆನ್ನಬಹುದಾದ ಗುಡಿಗಳಲ್ಲಿ ಕೆಲವು ದೇವಾಲಯಗಳನ್ನು ಹೊರತುಪಡಿಸಿದಂತೆ, ಬಹುತೇಕ ಗುಡಿಗಳು 16 ರಿಂದ 19ನೇ ಶತಮಾನಗಳ ಅವಧಿಯಲ್ಲಿ ನಿರ್ಮಾಣಗೊಂಡವು. ವಿಜಯನಗರೋತ್ತರ ಕಾಲದಲ್ಲಿ ಮಾಗಡಿ ಕೆಂಪೇಗೌಡರಂತಹ ಅರಸರಿಂದಲೂ ಸ್ಥಳೀಯ ರಾಜಪ್ರತಿನಿಧಿಗಳಿಂದಲೂ ನಿರ್ಮಾಣಗೊಂಡ ದೇಗುಲಗಳು ಹಲವು; ಅಂತೆಯೇ, ವಿವಿಧ ಜನಾಂಗಗಳ ಮುಖಂಡರೂ ಆಸ್ತಿಕ ಸ್ಥಿತಿವಂತರೂ ತಂತಮ್ಮ ಕೇರಿಗಳಲ್ಲೂ ಜನವಸತಿಪ್ರದೇಶಗಳಲ್ಲೂ ಅನೇಕ ದೇವಾಲಯಗಳ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ. ಇಂತಹ ಸಾಮುದಾಯಿಕ ಪ್ರಯತ್ನಗಳಿಂದ ರೂಪುಗೊಂಡ ಹಲವಾರು ದೇವಾಲಯಗಳನ್ನು ಬೆಂಗಳೂರಿನ ಕೇಂದ್ರಭಾಗದಲ್ಲಿರುವ ನಗರ್ತಪೇಟೆಯಲ್ಲಿ ನೀವು ಕಾಣಬಹುದು.

ಬೆಂಗಳೂರು ಟೌನ್‌ಹಾಲ್ ಸಮೀಪ ನಗರ್ತಪೇಟೆಯ ಧರ್ಮರಾಯಸ್ವಾಮಿ ದೇವಾಲಯದ ರಸ್ತೆಯಲ್ಲಿ ಅರ್ಧ ಕಿಮೀ ಆಚೀಚೆಗೆ ತಿರುಗಾಡುವುದರೊಳಗೆ ನಿಮಗೆ ಹತ್ತಾರು ದೇವಾಲಯಗಳ ದರ್ಶನವಾಗುತ್ತದೆ. ರಸ್ತೆಯ ಪ್ರಾರಂಭದಲ್ಲೇ ಜಲಕಂಠೇಶ್ವರನ ಗುಡಿ. ಈ ಗುಡಿಗೆ 600 ವರ್ಷಗಳ ಇತಿಹಾಸವಿದೆಯಂತೆ. ಕೆಂಪೇಗೌಡರ ಕಾಲಕ್ಕೆ ಬೆಂಗಳೂರಿನ ಕೋಟೆಯ ಒಂದು ದಿಕ್ಕಿನಲ್ಲಿದ್ದ ಅಲಸೂರು ಬಾಗಿಲಿನ ಸಮೀಪದಲ್ಲಿರುವ ಜಲಕಂಠೇಶ್ವರ ಎಂಬ ಹೆಸರಿನ ಶಿವನ ಗುಡಿಯ ಪಕ್ಕ ಕಲ್ಯಾಣಿಯೂ ಇದ್ದಿತಂತೆ. ಈ ದೇವಾಲಯದ ಎದುರಿಗೆ ಕೋಟೆ ಬಾಗಿಲು ಆಂಜನೇಯನ ಗುಡಿಯೂ ಪಕ್ಕದಲ್ಲಿ ಕೋದಂಡರಾಮನ ದೇಗುಲವೂ ಇವೆ. ಈ ಎಲ್ಲ ಗುಡಿಗಳ ಮೇಲಿನ ಶಿಖರಗಳು ಪೂರ್ವಕಾಲದವು; ಮಾಸಿದ ಬಣ್ಣದ ಗಾರೆಶಿಲ್ಪಗಳು ಇನ್ನೂ ಉಳಿದುಕೊಂಡಿವೆ.

ಮುಂದೆ, ಬೆಂಗಳೂರು ಕರಗದ ಜಾತ್ರೆಯ ಕೇಂದ್ರಸ್ಥಾನವಾದ ಧರ್ಮರಾಯಸ್ವಾಮಿ ದೇವಾಲಯ. ಆಕರ್ಷಕವಾದ ದೊಡ್ಡ ಗೋಪುರವು ದೂರದಿಂದಲೇ ಕಣ್ಸೆಳೆಯುತ್ತದೆ. ವಹ್ನಿಕುಲ ಕ್ಷತ್ರಿಯ ಸಮುದಾಯಕ್ಕೆ ಸೇರಿದ ಇಲ್ಲಿನ ಮುಖ್ಯಗುಡಿಯಲ್ಲಿ ಪಾಂಡವರ ಪ್ರತಿಮೆಗಳೂ ಶ್ರೀಕೃಷ್ಣ, ಆದಿಶಕ್ತಿ ಮತ್ತು ದ್ರೌಪದಿಯರ ಪ್ರತಿಮೆಗಳೂ ಇದ್ದು ನಿತ್ಯಪೂಜೆ ಸಲ್ಲುತ್ತಿದೆ. ಒಳಗುಡಿಯಲ್ಲೇ ಪೋತರಾಜನ ವಿಗ್ರಹವನ್ನೂ ಕಾಣಬಹುದು. ಗುಡಿಯ ಎದುರುಸಾಲಿನಲ್ಲಿರುವ ಶ್ರೀವೇಣುಗೋಪಾಲಕೃಷ್ಣಸ್ವಾಮಿ ದೇವಾಲಯವು ಯಾದವಕುಲದವರ ಗುಡಿ. ಇಲ್ಲಿ ರುಕ್ಮಿಣೀ ಸತ್ಯಭಾಮೆಯರೊಡನಿರುವ ಶ್ರೀಕೃಷ್ಣನ ಶಿಲ್ಪವು ಮನೋಹರವಾಗಿದೆ. ಮುಂದೆ, ನಗರ್ತ ಸಮುದಾಯದ ನಗರೇಶ್ವರ ದೇವಾಲಯವಿದೆ. ನಗರೇಶ್ವರನೆಂಬ ಹೆಸರಿನ ಶಿವಲಿಂಗ, ಅನ್ನಪೂರ್ಣಾಂಬ ದೇವಿಯ ಶಿಲ್ಪಗಳಲ್ಲದೆ ವೆಂಕಟೇಶ, ಭಕ್ತ ಆಂಜನೇಯ, ಮಹಿಷಮರ್ದಿನಿ ಮೊದಲಾದ ಕೆಲವು ವಿಶೇಷವಾದ ವಿಗ್ರಹಗಳೂ ಇವೆ. ಇಲ್ಲಿಯೇ, ಬೆಂಗಳೂರನ್ನು ಕಲ್ಯಾಣನಗರಿ ಎಂದು ಹೆಸರಿಸಿರುವ ಶಾಸನವಿರುವುದು ಗಮನಾರ್ಹ. ಮುಂದೆ ಅದೇ ರಸ್ತೆಯ ತಿರುವಿನ ಅಂಚಿನಲ್ಲಿ ವೈಷ್ಣವ ಗುಡಿಯೊಂದರಲ್ಲಿ ನೀವು ಲಕ್ಷ್ಮೀನಾರಾಯಣ ಮತ್ತು ಆಂಜನೇಯರ ಭವ್ಯವಾದ ಶಿಲ್ಪಗಳನ್ನು ನೋಡಬಹುದು. ಅದೇ ರಸ್ತೆಯಲ್ಲಿ ಮುಂದೆ ಶ್ರೀ ಜ್ಯೋತಿ ನಗರೇಶ್ವರ ದೇವಾಲಯ ಮತ್ತು ಶ್ರೀ ರಾಮಲಿಂಗೇಶ್ವರ ದೇವಾಲಯಗಳಿವೆ. ಇವೆರಡೂ ದೇವಾಲಯಗಳನ್ನು ಭಕ್ತಸಮುದಾಯದವರು ಇತ್ತೀಚೆಗೆ ನವೀಕರಿಸಿದ್ದು, ಗುಡಿಗೋಪುರಗಳು ಸುಸ್ಥಿತಿಯಲ್ಲಿವೆ. ಮೊದಲ ಗುಡಿಯಲ್ಲಿ ಗಾಣಿಗ ಸಮುದಾಯದ ಕುಲದೈವವಾದ ಜ್ಯೋತಿ ನಗರೇಶ್ವರನೆಂಬ ಶಿವಲಿಂಗವನ್ನೂ ಪ್ರಸನ್ನಪಾರ್ವತೀ ಮತ್ತಿತರ ದೇವತಾಶಿಲ್ಪಗಳನ್ನೂ ಕಾಣಬಹುದು. ದೇವಾಂಗಕುಲದವರ ನಿರ್ಮಾಣವಾದ ಶ್ರೀ ರಾಮಲಿಂಗೇಶ್ವರ ಗುಡಿಯಲ್ಲಿರುವ ಚೌಡೇಶ್ವರೀ ದೇವಿಯ ಶಿಲ್ಪವು ಮನೋಹರವಾಗಿದೆ.

ನಗರ್ತಪೇಟೆಯಲ್ಲಿರುವ ಇನ್ನೊಂದು ವಿಶೇಷವಾದ ದೇಗುಲ ಮಹಿಷಾಸುರ ಮರ್ದಿನಿಯ ದೇವಾಲಯ. ಮೈಸೂರು ಒಡೆಯರು ನಿರ್ಮಿಸಿದ ಈ ದೇವಾಲಯದ ದೇವಿಯ ಶಿಲ್ಪವು ಅತ್ಯಾಕರ್ಷಕವಾಗಿದೆ. ಅಷ್ಟಭುಜಗಳಲ್ಲಿ ನಾನಾ ಆಯುಧಗಳನ್ನು ಧರಿಸಿ ಮಹಿಷನನ್ನು ಕೊಲ್ಲುತ್ತಿರುವ ಭಂಗಿಯ ಚಿತ್ರಣ ಅದ್ಭುತವಾಗಿದೆ. ಮುಂದೆ, ಶ್ರೀ ಕಾಳಿಕಾಂಬ ಕಮಠೇಶ್ವರ ದೇವಾಲಯವಿದೆ. ವಿಶ್ವಕರ್ಮ ಸಮುದಾಯದ ಈ ಗುಡಿ ಸುಂದರವಾಗಿದೆ. ನಂದಿಯ ದೊಡ್ಡದೊಂದು ವಿಗ್ರಹವೂ ಆವರಣದಲ್ಲಿರುವ ಹಲವು ದೇವತಾಮೂರ್ತಿಗಳೂ ದರ್ಶನೀಯವಾಗಿವೆ. ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಾಲಯದಲ್ಲಿ ಲಕ್ಷ್ಮೀ ಪದ್ಮಾವತೀ ಸಮೇತನಾದ ವೆಂಕಟೇಶ್ವರನ ವಿಗ್ರಹವನ್ನು ನಗರ್ತರು ಆದಿನಾರಾಯಣನೆಂದು ಪೂಜಿಸುತ್ತಾರೆ. ಇಲ್ಲಿಯೇ ಇರುವ ಆಂಜನೇಯನ ಉಬ್ಬುಶಿಲ್ಪವೊಂದು ಆಕರ್ಷಕವಾಗಿದೆ. ಈ ಸರಣಿಯಲ್ಲಿ ಕೊನೆಯದಾಗಿ, ಚೆನ್ನಕೇಶವನ ದೇವಾಲಯ. ಗಾಣಿಗ ಸಮುದಾಯದವರ ನಿರ್ಮಾಣವಾದ ಈ ಗುಡಿಯಲ್ಲಿ ದೇವಿಯರ ಸಹಿತ ಮಹಾವಿಷ್ಣು ಚೆನ್ನಕೇಶವನೆಂಬ ಹೆಸರಿನಿಂದ ಪೂಜಿತನಾಗಿದ್ದಾನೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**
LINK- http://YouTube.com/AnanthkumarPratishthana







# ಅನಂತಯಾನ ಅಧ್ಯಾಯ- 14 ಬಾಗಿಲಿಗೆ ಬಂದ ಹರಿದಾಸರು

ನಿರೂಪಣೆ : ಟಿ.ಎಸ್. ಗೋಪಾಲ್

ಭಾರತ ಪೋಲಿಯೋ ಮುಕ್ತ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾದದ್ದು ೨೦೧೧ರ ವೇಳೆಗೆ. ಅದಕ್ಕಿಂತ ಎಷ್ಟೋ ಮುಂಚೆಯೇ ಜಗತ್ತಿನ ಅನೇಕ ದೇಶಗಳು ಈ ಬಾಲವೈರಿ ರೋಗವನ್ನು ಮಟ್ಟಹಾಕಿದ್ದವು. ೧೯೫೫ರಷ್ಟು ಹಿಂದೆಯೇ ಪೋಲಿಯೋ ವ್ಯಾಕ್ಸಿನ್ ಒಂದನ್ನು ಕಂಡುಹಿಡಿಯಲಾಗಿತ್ತು; ರಷ್ಯಾ ಅಮೆರಿಕಾ ಮೊದಲಾದ ದೇಶಗಳಲ್ಲಿ ಆ ವ್ಯಾಕ್ಸಿನ್ ಬಳಕೆ ಯಶಸ್ವಿಯೂ ಆಗಿತ್ತು; ಆದರೆ, ಆ ವ್ಯಾಕ್ಸಿನ್ನಿನ ಪರಿಣಾಮಗಳ ಅಧ್ಯಯನ ಇನ್ನೂ ನಡೆಯುತ್ತಿದ್ದುದರಿಂದಲೋ ಏನೋ ಭಾರತದ ಸರ್ಕಾರ ಅದರ ಬಳಕೆಗೆ ಅನುಮತಿ ಕೊಟ್ಟಿರಲಿಲ್ಲ.

೧೯೫೦ರ ದಶಕದ ಕೊನೆಯ ಹೊತ್ತಿಗೆ ಪೋಲಿಶ್ ಅಮೆರಿಕನ್ ವಿಜ್ಞಾನಿ ಡಾ. ಆಲ್ಬರ್ಟ್ ಸಬಿನ್ ಕಂಡುಹಿಡಿದ ಪೋಲಿಯೋ ವ್ಯಾಕ್ಸಿನ್ ಹೆಚ್ಚು ವಿಶ್ವಾಸಾರ್ಹವೆಂದು ಸಾಬೀತಾಯಿತು. ಭಾರತದ ಮಕ್ಕಳನ್ನು ಪೋಲಿಯೋ ಶಾಪದಿಂದ ಮುಕ್ತಗೊಳಿಸುವ ಸಲುವಾಗಿ ವಿಶ್ವ ಆರೋಗ್ಯ ಸಂಸ್ಥೆಯು ಡಾ. ಸಬಿನ್ ಅವರನ್ನು ಸಂಪರ್ಕಿಸಿ ಭಾರತಕ್ಕೆ ಭೇಟಿ ನೀಡುವಂತೆಯೂ, ಭಾರತೀಯ ವಿಜ್ಞಾನಿಗಳಿಗೆ ಪೋಲಿಯೋ ಲಸಿಕೆ ತಯಾರಿಕೆಯ ಬಗೆಗೆ ಅಗತ್ಯ ನೆರವು, ತರಬೇತಿ ನೀಡುವಂತೆಯೂ ಕೇಳಿಕೊಂಡಿತು.

ಅದರಂತೆ ೧೯೬೭ರಲ್ಲಿ ಭಾರತಕ್ಕೆ ಭೇಟಿ ನೀಡಿದ ಡಾ. ಸಬಿನ್ ತನ್ನೊಂದಿಗೆ ಪೋಲಿಯೋ ಲಸಿಕೆಗೆ ಅಗತ್ಯವಾದ ಸಾಮಗ್ರಿಗಳನ್ನೂ ತಂದರು. ಕೂನೂರಿನ ಪ್ಯಾಶ್ಚರ್ ಸಂಶೋಧನಾ ಕೇಂದ್ರದ ಭಾರತೀಯ ವಿಜ್ಞಾನಿಗಳಿಗೆ ಪೋಲಿಯೋ ಲಸಿಕೆ ತಯಾರಿಕೆಯ ಬಗೆಗೆ ಅಗತ್ಯ ಮಾಹಿತಿ, ತರಬೇತಿಗಳನ್ನೂ ನೀಡಿದರು. ದೇಶದಲ್ಲಿ ಪೋಲಿಯೋ ವ್ಯಾಕ್ಸಿನ್ ಕಾರ್ಯಕ್ರಮವನ್ನು ಜಾರಿಗೆ ತರುವ ಬಗ್ಗೆ ಭಾರತದ ಸರಕಾರಕ್ಕೆ ಮಹತ್ವದ ಸಲಹೆಗಳನ್ನೂ ಕೊಟ್ಟರು. ಏಳು ವರ್ಷದೊಳಗಿನ ಮಿಲಿಯಗಟ್ಟಲೆ ಭಾರತೀಯ ಮಕ್ಕಳಿಗೆ ಹಾಕುವುದಕ್ಕಾಗಿ ಅಗತ್ಯವಾದ ಲಸಿಕೆಗಳ ತಯಾರಿಕೆಗೆ ಅವಶ್ಯಕವಾದ ಸಾಮಗ್ರಿಗಳನ್ನು ಪ್ಯಾಶ್ಚರ್ ಕೇಂದ್ರಕ್ಕೆ ಪೂರೈಸಬೇಕೆಂದೂ ಅಮೆರಿಕದ ಸಹಭಾಗಿತ್ವದಲ್ಲಿ ಕೇವಲ ಆರು ತಿಂಗಳೊಳಗೆ ಲಕ್ಷಾಂತರ ಲಸಿಕೆಗಳನ್ನು ತಯಾರಿಸಿ ಭಾರತೀಯ ಮಕ್ಕಳಿಗೆ ಲಸಿಕೆ ಹಾಕುವ ಯೋಜನೆಯನ್ನು ಕಾರ್ಯಗತಗೊಳಿಸಬಹುದೆಂದೂ ವರದಿ ಸಲ್ಲಿಸಲಾಯಿತು.

ಎಲ್ಲವೂ ಅಂದುಕೊಂಡಂತೆ ನೆರವೇರಿದ್ದರೆ, ೧೯೬೭ರ ಕೊನೆಯೊಳಗಾಗಿ ಕೂನೂರಿನ ಪ್ಯಾಶ್ಚರ್ ಸಂಶೋಧನಾ ಸಂಸ್ಥೆ ಐದು ತಿಂಗಳ ಅವಧಿಯಲ್ಲಿ ಮೂರು ಬಗೆಯ ಒಂದು ನೂರು ಮಿಲಿಯ ಡೋಸೇಜುಗಳಷ್ಟು ಪ್ರಮಾಣದ ಲಸಿಕೆಗಳನ್ನು ತಯಾರಿಸುವ ನಿರೀಕ್ಷೆಯಿತ್ತು. ಆದರೆ, ಸರ್ಕಾರಿಯಂತ್ರದ ಮಂದಗತಿಯ ಧೋರಣೆಯಿಂದಾಗಿ, ಭಾರತ ಸರ್ಕಾರ ಸಕಾಲದಲ್ಲಿ ಸ್ಪಂದಿಸಲಿಲ್ಲ. ಮುಂದಿನ ಏಳೆಂಟು ವರ್ಷಗಳು ಹೀಗೆಯೆ ಕಳೆದುಹೋದವು. ಈ ನಡುವೆ ಯಾವಾಗಲೋ ಒಂದಿಷ್ಟು ಲಸಿಕೆ ತಯಾರಿಕೆಯಲ್ಲಿ ಯಶಸ್ವಿಯಾದ ಮಾತು ಕ್ಷೀಣವಾಗಿ ಕೇಳಿಬಂದಿತು, ಅದೇ ಕೊನೆ. ಸಂಕಲ್ಪ ಮತ್ತು ಧನವಿನಿಯೋಗಗಳ ಕೊರತೆಯಿಂದಾಗಿ ಲಸಿಕೆ ತಯಾರಿಕೆಯ ಕೇಂದ್ರವೇ ಮುಚ್ಚಿಹೋಯಿತು.

ವಿಶ್ವಾದ್ಯಂತ ಲಕ್ಷಾಂತರ ಮಕ್ಕಳನ್ನು ಪೋಲಿಯೋ ರೋಗದ ದೈತ್ಯ ಹಿಡಿತದಿಂದ ಪಾರುಮಾಡಲು ನೆರವಾದ ಆ ಶ್ರೇಷ್ಠ ವಿಜ್ಞಾನಿಯೇ ಬಂದು ಬೇಡಿಕೊಂಡರೂ ಭಾರತದ ಸರ್ಕಾರ ಸೂಕ್ತವಾಗಿ ಸ್ಪಂದಿಸದ ಕಾರಣ ಸಾವಿರಾರು ಭಾರತೀಯ ಮಕ್ಕಳು ಪೋಲಿಯೋ ರೋಗಕ್ಕೆ ತುತ್ತಾಗಿ ಅಂಗವೈಕಲ್ಯಕ್ಕೆ ಗುರಿಯಾಗುವ ದೌರ್ಭಾಗ್ಯ ಇನ್ನಷ್ಟು ವರುಷಗಳವರೆಗೆ ಮುಂದುವರಿಯಿತು. ಇದೇ ನಿರ್ಲಕ್ಷ್ಯದ ಅವಧಿಯಲ್ಲಿ ಪೋಲಿಯೋ ಜಾಡ್ಯಕ್ಕೆ ಗುರಿಯಾದ ನತದೃಷ್ಟ ಭಾರತೀಯ ಮಕ್ಕಳಲ್ಲಿ ಅನಂತಕುಮಾರನೂ ಒಬ್ಬ. ೧೯೬೫ರ ಬೇಸಗೆ. ಆ ವರ್ಷದ ಶೈಕ್ಷಣಿಕ ಅವಧಿ ಪ್ರಾರಂಭಗೊಳ್ಳುವಾಗ ಅನಂತಕುಮಾರನನ್ನು ಶಾಲೆಗೆ ಸೇರಿಸಬಹುದೆಂದು ಶಾಸ್ತ್ರಿ ದಂಪತಿ ಯೋಚಿಸಿಕೊಂಡಿದ್ದರು. ಆ ಹೊತ್ತಿಗೆ ಮಗನಿಗೆ ಕಾಣಿಸಿಕೊಂಡ ಜ್ವರವು ತಮ್ಮ ಯೋಜನೆಯನ್ನು ದಿಕ್ಕುತಪ್ಪಿಸಬಹುದೆಂಬ ಕಲ್ಪನೆಯಾದರೂ ತಂದೆತಾಯಿಗಳಿಗೆ ಇರಲಿಕ್ಕಿಲ್ಲ. ಎರಡು ಮೂರು ದಿನವಾದರೂ ಜ್ವರ ವಾಸಿಯಾಗದಿದ್ದಾಗ ಶಾಸ್ತ್ರಿಗಳು ಅನಂತಕುಮಾರನನ್ನು ರೈಲ್ವೇ ಆಸ್ಪತ್ರೆಗೆ ಸೇರಿಸಿದರು.

ಜ್ವರದಿಂದ ಬಳಲುತ್ತಿದ್ದ ಮಗುವಿಗೆ ಪೋಲಿಯೋ ಆಗಿರುವ ಸಾಧ್ಯತೆಯಿದೆಯೆಂಬ ವೈದ್ಯರ ಮಾತುಗಳನ್ನು ಕೇಳಿಯೇ ಗಿರಿಜಾ ಶಾಸ್ತ್ರಿ ಕುಸಿದು ಬಿದ್ದರು. ಏನೂ ತೋಚದೆ ಕಂಗೆಟ್ಟು ಕುಳಿತ ಪತ್ನಿಯನ್ನು ನಾರಾಯಣ



ಶಾಸ್ತ್ರಿಯವರು ಸಂತೈಸಿದರಾದರೂ ಅವರ ಮನಸ್ಸಿನಲ್ಲೂ ನಿರಾಶೆ, ನಿಸ್ಸಹಾಯಕತೆಗಳು ಕವಿದಿದ್ದವು. ಮೈಸೂರಿನ ಅವಿಭಕ್ತ ಕುಟುಂಬದಲ್ಲಿ ಜೊತೆಯಲ್ಲಿದ್ದ ಅವರ ಸೋದರಸಂಬಂಧಿ ಸೂರ್ಯನಾರಾಯಣ, ಪೋಲಿಯೋ ರೋಗದ ದೆಸೆಯಿಂದಲೇ ಕಾಲಿನ ಶಕ್ತಿ ಕಳೆದುಕೊಂಡಿದ್ದ. ಪಾಪ, ಅವನು ಸ್ನಾನಾದಿಗಳಿಗೆ ಹೋಗಬೇಕಾದಾಗ ನಾರಾಯಣ ಶಾಸ್ತ್ರಿಗಳೇ ಎತ್ತಿಕೊಂಡು ಹೋಗಿಬರುತ್ತಿದ್ದರು. ಇನ್ನು ಗ್ಯಾಂಗ್ರಿನ್ ಪರಿಣಾಮವಾಗಿ ತಮ್ಮ ತಂದೆ ನರಹರಿ ಶಾಸ್ತ್ರಿಗಳ ಕಾಲುಗಳನ್ನೇ ಕತ್ತರಿಸಬೇಕಾಗಿ ಬಂದಿತ್ತು. ಆಗಲೂ ನಾರಾಯಣ ಶಾಸ್ತ್ರಿಗಳು ತಮ್ಮ ತೋಳುಗಳಲ್ಲಿ ತಂದೆಯನ್ನು ಎತ್ತಿಕೊಂಡು ಹೋಗಿ ಸ್ನಾನ ಮಾಡಿಸಿಕೊಂಡು ಕರೆತರುತ್ತಿದ್ದರು. ಇವರಿಬ್ಬರ ಸೇವೆ ಮಾಡಿದ ತನಗೆ ಈಗ ತನ್ನ ಮಗನನ್ನೇ ಜೀವಮಾನ ಪರ್ಯಂತ ಎತ್ತಿಕೊಂಡು ತಿರುಗಾಡುವ ಪರಿಸ್ಥಿತಿಯನ್ನು ವಿಧಿ ತಂದೊಡ್ಡಿದೆಯೇ? ಎಂದು ನಾರಾಯಣ ಶಾಸ್ತ್ರಿಗಳು ಪರಿತಪಿಸಿದರು. ಆದರೆ ಹೆಂಡತಿಮಕ್ಕಳೆದುರು ತಮ್ಮ ಅಧೈರ್ಯವನ್ನು ಪ್ರದರ್ಶಿಸುವಂತಿರಲಿಲ್ಲ. ಇನ್ನಿಬ್ಬರು ಚಿಕ್ಕ ಮಕ್ಕಳ ಪಾಲನೆಗೆ ಪತ್ನಿಯನ್ನು ಮನೆಯಲ್ಲೇ ಬಿಟ್ಟು, ಆಸ್ಪತ್ರೆಯಲ್ಲಿರುವ ಮಗನ ಶುಶ್ರೂಷೆಯನ್ನು ತಾವು ವಹಿಸಿಕೊಂಡರು.

ಚಕ್ರವರ್ತಿಯೋಗವುಳ್ಳವನೆಂದು ತಾತ ನರಹರಿ ಶಾಸ್ತ್ರಿಗಳಿಂದ ಹಾರೈಕೆ ಪಡೆದ ಮಗುವಿಗೆ ಇದೀಗ ಬಂದೊದಗಿದ ವಿಪತ್ತಿಗಾಗಿ ತಾಯಿ ಕಣ್ಣೀರುಗರೆಯತೊಡಗಿದಳು. ಮರುದಿನ ತಾಯಿ ತನ್ನನ್ನು ನೋಡಲು ಬಂದಾಗ ಅನಂತ ತಾನೇ ಅವರನ್ನು ಅಕ್ಕರೆಯಿಂದ ವಿಚಾರಿಸಿಕೊಂಡ. ಯಾಕಮ್ಮ ಕಣ್ಣೆಲ್ಲ ಕೆಂಪಾಗಿದೆ? ಎಂದು ಕೇಳಿದ. ತಾಯಿ ಪಾಪ, ಏನೆಂದು ಹೇಳಿಯಾಳು? 'ಸಿಟಿ ಬಸ್ಸಿನಲ್ಲಿ ಬಂದೆವಲ್ಲ, ದಾರಿಯಲ್ಲಿ ತುಂಬ ದೂಳು. ಅದೇ ಕಣ್ಣಿಗೆ ಬಿದ್ದು ಕೆಂಪಾಗಿದೆ, ಅಷ್ಟೇ ಮಗು' ಎಂದು ಗಿರಿಜಾರವರು ವಿವರಣೆ ಕೊಡಬೇಕಾಯಿತು.

ಆ ರಾತ್ರಿ ನಿದ್ರೆಯಿಲ್ಲದೆ ನೆಮ್ಮದಿಗೆಟ್ಟ ಗಿರಿಜಾ ಶಾಸ್ತ್ರಿಯವರಿಗೆ ಯಾವಾಗಲೋ ಬೆಳಗಿನ ಜಾವದಲ್ಲಿ ಒಂದಿಷ್ಟು ಮಂಪರು. ಯಾವುದೋ ರೂಪವೊಂದು ಎದುರಿಗೆ ಕಾಣಿಸಿಕೊಂಡಿದೆ. ಯಾರೆಂದು ತಿಳಿಯವೊಲ್ಲದು. ಹಾಗೆ ಕಂಡ ರೂಪವುಳ್ಳ ವ್ಯಕ್ತಿ ಆಕೆಯನ್ನು ಕುರಿತು 'ಮಗನ ಅನಾರೋಗ್ಯಕ್ಕೆ ಏಕೆ ಚಿಂತಿಸುತ್ತೀಯಾ, ನಿನ್ನ ಮಗನನ್ನು ನಾನು ಕಾಪಾಡುತ್ತೇನೆ' ಎನ್ನುತ್ತಿದ್ದಾರೆ. ಗಿರಿಜಾರವರು ದೀನವಾಗಿ ಆತನನ್ನೇ ನೋಡುತ್ತಿರುವಂತೆಯೇ ಆ ವ್ಯಕ್ತಿ ಮಾತು ಮುಂದುವರಿಸುತ್ತಾರೆ: "ನಿಮ್ಮ ಮನೆ ಬಾಗಿಲಿಗೆ ಎಂಟು ಜನ ಹರಿದಾಸರು ಬರುತ್ತಾರೆ. ಅವರನ್ನು ಸ್ವಾಗತಿಸಿ ಕಾಲುತೊಳೆದು, ಅವರಿಗೆ ಭೋಜನಸಾಮಗ್ರಿಯೆಲ್ಲ ಕೊಡು. ನಿನ್ನ ಬೆನ್ನಿಗೆ ಕಾಲುತಾಗಿಸಿ ಆಶೀರ್ವಾದ ಮಾಡುವಂತೆ ಹೇಳು. ಎಲ್ಲ ಸರಿಯಾಗುತ್ತದೆ"

ಅನುಗ್ರಹವಾಣಿ ಕೊನೆಗೊಂಡು ದೃಶ್ಯ ಮರೆಯಾಯಿತು. ಕನಸಲ್ಲಿ ಕಂಡದ್ದು ಅಸ್ಪಷ್ಟವಾದರೂ ಮಾತು ಕಿವಿಯಲ್ಲೇ ಉಳಿದಿತ್ತು. ನಾರಾಯಣ ಶಾಸ್ತ್ರಿಗಳು ಮಗನೊಡನೆ ಆಸ್ಪತ್ರೆಯಲ್ಲಿದ್ದರಲ್ಲ, ಬೆಳಗ್ಗೆ ಅವರು ಬರುವುದನ್ನೇ ಗಿರಿಜಾ ಕಾಯುತ್ತಿದ್ದರು. ಈಗ ಅವರಿಗೆ ಮಗನ ಆರೋಗ್ಯವನ್ನು ಪುಟ 4 ರಲ್ಲಿ ಮುಂದುವರೆದಿದೆ





ಪುಟ 3 ರಿಂದ ತಿಳಿದುಕೊಳ್ಳುವ ಕುತೂಹಲಕ್ಕಿಂತ ತಾನು ಕಂಡ ಸ್ವಪ್ನವನ್ನು ಗಂಡನಿಗೆ ವರ್ಣಿಸಿ ಹೇಳುವ ಕಾತುರತೆಯೇ ಮಿಗಿಲಾಗಿತ್ತು. ಅಷ್ಟರಲ್ಲಿ ಮನೆಬಾಗಿಲಿಗೆ ಯಾರೋ ಬಂದರು. ಗಂಡನ ಬರವನ್ನು ಕಾಯುತ್ತಿದ್ದ ಗಿರಿಜಾರವರಿಗೆ ಸಾಕ್ಷಾತ್ ಪುರಂದರದಾಸರ ದರ್ಶನವೇ ಆದಂತೆ ಭ್ರಮೆಯಾಯಿತು. ಇದೇನು ಕನಸೋ ನಿಜವೋ ಎಂದು ಭ್ರಾಂತಳಾಗಿ ನೋಡಿದ ಆ ಗೃಹಿಣಿಗೆ ಹಾಗೆ ದಾಸವೇಷಧಾರಿಯಾಗಿ ಕಂಡವರು ನೆರೆಮನೆಯ ಸಜ್ಜನ ಮಿತ್ರರಾದ ವೈದ್ಯರೆಂಬುವರು. ವೈದ್ಯರು ರೈಲ್ವೆ ಇಲಾಖೆಯಲ್ಲಿ ಶಾಸ್ತ್ರಿಯವರ ಸಹೋದ್ಯೋಗಿಯಾಗಿದ್ದವರು. ಅವರಿಗೆ ಈಗಾಗಲೇ ಅನಂತಕುಮಾರನ ಅನಾರೋಗ್ಯದ ಬಗೆಗೆ ತಿಳಿದಿತ್ತು. ಹಾಗಾಗಿ ಬಹುಶಃ ಶಾಸ್ತ್ರಿಗಳು ಆಸ್ಪತ್ರೆಯಿಂದ ಹಿಂತಿರುಗಿರಬಹುದೆಂದುಕೊಂಡು ವೈದ್ಯರು ಅವರಿಂದ ಅನಂತನ ಆರೋಗ್ಯದ ಬಗೆಗೆ ತಿಳಿದುಕೊಳ್ಳಲು ಬಂದಿರಬೇಕೆಂದು ಗಿರಿಜಾ ತರ್ಕಿಸಿದರು. ಆದರೆ ಈ ದಾಸರ ವೇಷಭೂಷಣವೇಕೆಂದು ಆಕೆಗೆ ತಿಳಿಯಲಿಲ್ಲ.

ವೈದ್ಯರವರು ಗಿರಿಜಾರವರನ್ನೇ ಉದ್ದೇಶಿಸಿ, "ಗಿರಿಜಮ್ಮ, ಈಗ ರಾಮನವಮಿಯ ಸಂದರ್ಭ. ಅನ್ನ ಸಂತರ್ಪಣೆ ಮಾಡುವುದಕ್ಕಾಗಿ ಆಹಾರಸಾಮಗ್ರಿಗಳನ್ನು ಸಂಗ್ರಹಿಸಲು ನಾವು ಹೊರಡುತ್ತೇವೆ. ನೀವು ನನ್ನ ತಂಗಿ ಇದ್ದ ಹಾಗೆ. ಆದ್ದರಿಂದ ಮೊದಲಿಗೆ ನಿಮ್ಮ ಮನೆಗೇ ಬರಬೇಕೆಂದಿದ್ದೇವೆ. ನಾವು ಕೆಲವರು ದಾಸರ ವೇಷದಲ್ಲಿ ಇವತ್ತು ಒಂಬತ್ತು ಗಂಟೆಯ ಹೊತ್ತಿಗೆ ನಿಮ್ಮ ಮನೆಗೆ ಬರುತ್ತೇವೆ. ನಿಮ್ಮಲ್ಲಿ ಏನಿದೆಯೋ ಎಷ್ಟು ಸಾಧ್ಯವೋ ಅಷ್ಟು ಜೋಳಿಗೆಗೆ ಹಾಕಿ. ಎಲ್ಲ ಒಳ್ಳೆಯದಾಗುತ್ತದೆ" ಎಂದು ಹೇಳಿ ಹೊರಟರು.

ವೈದ್ಯರ ಮಾತುಗಳನ್ನು ಕೇಳಿ ಗಿರಿಜಾರವರ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ತಾನು ಕಂಡ ಕನಸು ಹೀಗೆ ನನಸಾಗುತ್ತಿರುವುದಕ್ಕೆ ಮನಸ್ಸು ತುಂಬಿ ಬಂದಿತು. ಬೇಗ ಬೇಗನೆ ಸ್ನಾನ ಮುಗಿಸಿ ಮಡಿಯುಟ್ಟುಕೊಳ್ಳುವಷ್ಟರಲ್ಲಿ ಆಸ್ಪತ್ರೆಯಿಂದ ಶಾಸ್ತ್ರಿಯವರ ಆಗಮನವೂ ಆಯಿತು. ಶಾಸ್ತ್ರಿಗಳು ಆಸ್ಪತ್ರೆಯಿಂದ ಬಂದವರೇ ಕಾಲೊನಿಯ ಹಾಲು ಸರಬರಾಜು ಕೇಂದ್ರದಿಂದ ಹಾಲು ತರಲು ಹೊರಟರು. ಆಸ್ಪತ್ರೆಯಲ್ಲಿ ರೋಗಿಗಳಿಗೆ ಬ್ರೆಡ್ ಕೊಡುತ್ತಾರೆಯೇ ಹೊರತು ಹಾಲು ಕೊಡುವ ವ್ಯವಸ್ಥೆಯಿಲ್ಲ. ಅನಂತಕುಮಾರನಿಗೆ ಮನೆಯಲ್ಲಿ ಕೊಡುತ್ತಿದ್ದಂತೆ ಹಾಲಿಗೆ ವಿವಾ ಪುಡಿಯನ್ನು ಬೆರೆಸಿ ಫ್ಲಾಸ್ಕಿನಲ್ಲಿ ಹಾಕಿ ತೆಗೆದುಕೊಂಡು ಹೋಗಬೇಕಲ್ಲ. ಆ ಧಾವಂತದಲ್ಲೇ ಹೊರಟ ಪತಿಯೊಡನೆ ಗಿರಿಜಾ ತಾವು ಕಂಡ ಕನಸನ್ನೂ ನೆರೆಮನೆಯ ವೈದ್ಯರವರು ಬಂದು ಹೇಳಿದ ಮಾತನ್ನೂ ವಿವರಿಸಿದರು. ಹೇಗೂ ಆಸ್ಪತ್ರೆಯಲ್ಲಿ ಮಗುವನ್ನು ನರ್ಸ್‌ಗಳು ನೋಡಿಕೊಳ್ಳುತ್ತಿರುತ್ತಾರೆ. ಈಗ ಒಂಬತ್ತು ಗಂಟೆಗೆ ವೈದ್ಯರೂ ಅವರ ಜೊತೆಯವರೂ ಬಂದುಹೋಗುವವರೆಗೆ ಮನೆಯಲ್ಲೇ ಇರುವಂತೆ ಗಂಡನಿಗೆ ಹೇಳಿದರು.

ಹೇಳಿದ ಹೊತ್ತಿಗೆ ಸರಿಯಾಗಿ ಹರಿದಾಸ ವೇಷಧಾರಿಗಳ ಆಗಮನವಾಯಿತು. ಗಿರಿಜಾರವರಿಗೆ ಕನಸಿನಲ್ಲಿ ಸಿಕ್ಕ ಸೂಚನೆ ನಿಜವಾಯಿತೋ ಎನ್ನುವಂತೆ ಒಟ್ಟು ಎಂಟು ಜನರೇ ದಾಸರ ವೇಷದಲ್ಲಿ ಆಗಮಿಸಿದ್ದರು. ಶಾಸ್ತ್ರಿ ದಂಪತಿಯವರು ಅವರೆಲ್ಲರ ಕಾಲು ತೊಳೆದು ಪೂಜಿಸಿ, ಅವರ ಜೋಳಿಗೆಯೊಳಕ್ಕೆ ಆಹಾರಸಾಮಗ್ರಿಗಳನ್ನು ಒಪ್ಪಿಸಿದರು. ಬಂದವರು ಎದ್ದು ಹೊರಡುವ ಮುನ್ನ ಮೊದಲಿಗೆ ಗಿರಿಜಾರವರೇ ಮನೆಯಿಂದ ಹೊರಬಂದರು. ಹೊರಾವರಣದ ಕಳ್ಳಿಯ ಬೇಲಿಯ ನಡುವೆ ಇದ್ದ ಮರದ ಗೇಟಿಗೆ ಅಡ್ಡಲಾಗಿ ಅಂಬೆಗಾಲೂರಿ ಕುಳಿತರು. ಬಂದ ಹರಿದಾಸರೆಲ್ಲ ತಮ್ಮ ಬೆನ್ನಮೇಲೆ ಕಾಲುತಾಗಿಸಿ ಹೋಗಬೇಕೆಂದು ಕೇಳಿಕೊಂಡರು. ಆದರೆ, ಆ ಸಾತ್ವಿಕ ಮಹಿಳೆಯ ಬೆನ್ನಿಗೆ ಕಾಲುತಾಗಿಸಲು ಯಾರೂ ಒಪ್ಪಲಿಲ್ಲ. ಎಲ್ಲಾದರೂ ಉಂಟೇ, ಈ ಅಪಚಾರಕ್ಕೆ ನಮ್ಮ ಮನಸ್ಸು ಒಪ್ಪುವುದಿಲ್ಲ ಎಂದುಬಿಟ್ಟರು. ಕೊನೆಗೆ ವೈದ್ಯರವರೇ ಉಳಿದವರಿಗೆಲ್ಲ ನಿಜಸಂಗತಿಯನ್ನು ವಿವರಿಸಿ ಹೇಳಿದರು. ಗಿರಿಜಮ್ಮ ತನಗೆ ತಂಗಿಯಿದ್ದ ಹಾಗೆ. ಈಗ ಆಕೆ ತನ್ನ ಮಗನನ್ನು ಅನಾರೋಗ್ಯದಿಂದ ರಕ್ಷಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಹೀಗೆ ದೀನಳಾಗಿ ಕೋರಿಕೆ ಸಲ್ಲಿಸುತ್ತಿದ್ದಾರೆ. ಅವರ ಮಾತಿಗೆ ಮನ್ನಣೆ ಕೊಡಬೇಕಾದುದು ತಮ್ಮ ಕರ್ತವ್ಯ. ಮಹಿಳೆಯೊಬ್ಬಳ ಬೆನ್ನಮೇಲೆ ಕಾಲಿಡುವುದು ಅಪಚಾರವೇ ಹೌದು. ಆದರೆ, ಈ ಸಂದರ್ಭದಲ್ಲಿ ಕಿಂಚಿತ್ ಪಾದಸ್ಪರ್ಶವಾಗುವುದರಿಂದ ಆಕೆಗೂ ಆಕೆಯ ಕುಟುಂಬಕ್ಕೂ ಕ್ಷೇಮಸಾಧನೆಯಾಗುವುದಾದರೆ ದೋಷವೆಂದು ಪರಿಗಣಿತವಾಗುವುದಿಲ್ಲ ಎಂದು ಸಮಜಾಯಿಷಿ ಕೊಟ್ಟರು. ಈ ಮಾತಿಗೆ ಒಪ್ಪಿ ಬಂದವರೆಲ್ಲರೂ ಗಿರಿಜಾ ಶಾಸ್ತ್ರಿಯವರ ಬೆನ್ನಿಗೆ ಪಾದತಾಗಿಸಿದ ಶಾಸ್ತ್ರ ಮಾಡಿ ಹೊರಟರು. ಕನಸಿನಲ್ಲಿ ತನಗೆ ಒದಗಿದ ಆದೇಶ ಹೀಗೆ ಫಲಿಸಿದ ಬಗೆಗೆ ಗಿರಿಜಾ ಸಮಾಧಾನಪಟ್ಟುಕೊಂಡರು. ಅಂದು ಸಂಜೆ ಗಿರಿಜಾ ಶಾಸ್ತ್ರಿಯವರು ಆಸ್ಪತ್ರೆಗೆ ಹೋದಾಗ ಡಾಕ್ಟರ್ ಎದುರಿಗೇ ಸಿಕ್ಕರು. ಹಸನ್ಮುಖರಾಗಿದ್ದ ಡಾಕ್ಟರರು "ನಿಮಗೊಂದು ಒಳ್ಳೆಯ ಸುದ್ದಿ" ಎಂದಾಗ ಆಕೆಗೆ ಅಚ್ಚರಿಯೇ ಆಯಿತು. "ನಿಮ್ಮ ಅದೃಷ್ಟ ಚೆನ್ನಾಗಿತ್ತು ಗಿರಿಜಾರವರೇ. ನಿಮ್ಮ ಮಗನಿಗೆ ಆಗಿರುವ ಪೋಲಿಯೋ ಕಾಯಿಲೆಯ ಸ್ವರೂಪಲಕ್ಷಣಗಳು ತುಂಬ ತೀವ್ರವಾದದ್ದೇನೂ ಅಲ್ಲ. ಅದನ್ನು ಗುಣಪಡಿಸಲು ಸಾಧ್ಯವಿದೆ" ಎಂದ ಡಾಕ್ಟರರ ಮಾತುಗಳನ್ನು ಕೇಳಿ ಗಿರಿಜಾರವರಿಗೆ ಸ್ವರ್ಗವೇ ಕೈಗೆಟುಕಿದಂತಾಯಿತು. "ಲಕ್ಷದಲ್ಲೊಬ್ಬರಿಗೆ ಇಂಥ ಭಾಗ್ಯ ಲಭಿಸುತ್ತದೆ, ನೀವು ಅದೃಷ್ಟಶಾಲಿಗಳು" ಎಂದು ಮಾತು ಮುಂದುವರಿಸಿದ ಡಾಕ್ಟರರು "ಆದರೆ.." ಎಂದಾಗ ಗಿರಿಜಾ ಇದೇನು ಹೇಳುತ್ತಾರೋ ಎಂದು ಆತಂಕವೂ ಆಯಿತು. "ಮುಂದಿನ ಒಂದು ವರ್ಷ ನೀವು ಮಗುವನ್ನು ತುಂಬ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಮಗುವನ್ನು ನೆಲಕ್ಕೆ ಬಿಡದ ಹಾಗೆ , ನಡೆಯದ ಹಾಗೆ ಎಚ್ಚರವಹಿಸಬೇಕು. ತೊಡೆಯ ಮೇಲೆ ಕೂರಿಸಿಕೊಂಡೇ ಕಾಪಾಡಿಕೊಳ್ಳಿ. ಹಾಗಿದ್ದರೆ ಮಾತ್ರ ಮುಂದೆ ಪೋಲಿಯೋ ತೊಂದರೆಯೇನೂ ಬಾಧಿಸುವುದಿಲ್ಲ" ಎಂದು ಸೂಚನೆಕೊಟ್ಟರು. ಅನಂತಕುಮಾರ ಎಲ್ಲರಂತೆ ಸಾಮಾನ್ಯಸ್ಥಿತಿಗೆ ಬರುವುದಾದರೆ ಡಾಕ್ಟರ್ ಹೇಳುವ ಯಾವುದೇ ನಿಯಮವನ್ನು ಚಾಚೂತಪ್ಪದೆ ಪಾಲಿಸಲು ಗಿರಿಜಾ ಸಿದ್ಧರಿದ್ದರು.

ಅದರಂತೆಯೇ ಶಾಸ್ತ್ರಿ ದಂಪತಿ ಡಾಕ್ಟರರ ಸಲಹೆಸೂಚನೆಗಳನ್ನು ಬಲು ಜಾಗ್ರತೆವಹಿಸಿ ಪಾಲಿಸಿದರು. ದಿನವೂ ಅನಂತಕುಮಾರನ ತಮ್ಮ, ತಂಗಿಯರನ್ನು ಶಾಲೆಗೆ ಕಳುಹಿಸಿದ ಮೇಲೆ ಗಿರಿಜಾರವರು ಅನಂತನನ್ನು ಜತನದಿಂದ ತೊಡೆಯ ಮೇಲೆಯೇ ಕೂರಿಸಿಕೊಂಡು ಪಾಠ ಹೇಳಿಕೊಡುತ್ತಿದ್ದರು. ತಾಯಿಯ ಅಪಾರ ಶ್ರದ್ಧೆಯ ಫಲವಾಗಿ ವರ್ಷ ಕಳೆಯುವುದರೊಳಗೆ ಅನಂತಕುಮಾರ ಅಪಾಯದಿಂದ ಸಂಪೂರ್ಣವಾಗಿ ಪಾರಾದ. ಮುಂದಿನ ರಾಮನವಮಿಯ ಹೊತ್ತಿಗೆ ಎಲ್ಲ ಮಕ್ಕಳಂತೆ ಸಹಜವಾಗಿ ಓಡಾಡತೊಡಗಿ ತಾಯ್ತಂದೆಯರ ಕಣ್ಣುಗಳಿಗೆ ಹಬ್ಬವುಂಟುಮಾಡಿದ.

ಮುಂದೊಮ್ಮೆ ಅನಂತಕುಮಾರರ ನಡಿಗೆಯ ವೇಗಕ್ಕೆ ಸಮನಾಗಿ ಹೆಜ್ಜೆಹಾಕಲಾರದೆ ಪರಿಚಿತರೊಬ್ಬರು, "ಸರ್, ನಿಮ್ಮ ನಡಿಗೆಯ ಸಮನಾಗಿ ನಮಗೆ ನಡಿಯೋದಕ್ಕಾಗಲ್ಲ, ನಾವು ಓಡಿಕೊಂಡೇ ಬರಬೇಕು" ಎಂದು ಏದುಸಿರು ಬಿಡುವಾಗ, ಅನಂತಕುಮಾರ್ ಮುಗುಳ್ನಕ್ಕು "ಇದರ ಕೀರ್ತಿಯೆಲ್ಲ ನನ್ನ ತಾಯಿಗೆ ಸಲ್ಲಬೇಕು" ಎಂದರು!

## ಪುಟ 1 ರಿಂದ ಪಥಿಕರಿಗೆ ಪಥವಾದ 'ಪಥದರ್ಶಿ'

ಜವಾಹರ ಲಾಲ್ ನೆಹರು ವಿಶ್ವವಿದ್ಯಾಲಯದ ಕುಲಪತಿ ಡಾ. ಶ್ರೀಮತಿ ಶಾಂತಿಶ್ರೀ ಪಂಡಿತ್, ರಾಷ್ಟ್ರೀಯ ಸಮಾಜ ವಿಜ್ಞಾನ ಪರಿಷತ್ತಿನ ಡಾ. ಶೀಲಾ ರಾಯ್, ಅಟಲ್ ಬಿಹಾರಿ ವಾಜಪೇಯಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎ. ಡಿ. ಎನ್. ಬಾಜಪೇಯಿ, ಪರಿಷತ್ತಿನ ಮಾಜಿ ಅಧ್ಯಕ್ಷ ರಾಜಕುಮಾರ್ ಭಾಟಿಯಾ ಮುಂತಾದವರು ಮಾತನಾಡಿ ಕೃಷ್ಣಭಟ್ಟರ ಜೊತೆಗಿನ ತಮ್ಮ ಬಾಂಧವ್ಯವನ್ನು ಸ್ಮರಿಸಿಕೊಂಡರು.

ಸಮಾರಂಭದಲ್ಲಿ ವಿಧಾನಸಭೆಯ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಬಾಬು ಕೃಷ್ಣಮೂರ್ತಿ, ಡಾ. ವಾಮನಾಚಾರ್ಯ, ಅರವಿಂದ ಲಿಂಬಾವಳಿ, ನಾಡೋಜ ಮಹೇಶ ಜೋಷಿ, ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್, ಅನೇಕ ವಿಶ್ವವಿದ್ಯಾಲಯಗಳ ಕುಲಪತಿಗಳು, ಗಣ್ಯರು ಮತ್ತು ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು ಪಾಲ್ಗೊಂಡಿದ್ದರು. **ವರದಿ - ಜಿ. ಎಂ. ಇನಾಂದಾರ್**

## ಗೀತೆಯ ಸಂದೇಶ

**ದ್ವಾವಿಮೌ ಪುರುಷೌ ಲೋಕೇ ಕ್ಷರಾಕ್ಷರ ಏವ ಚ |**
**ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ || ೧೫.೧೬ ||**

ಲೋಕೇ – ಜಗತ್ತಿನಲ್ಲಿ (ದೇಹದಲ್ಲಿ); ಕ್ಷರ – ನಾಶವಾಗುವ; ಅಕ್ಷರ – ನಾಶವಾಗದ, ಇಮೌ ದ್ವೌ (ಏವ ಚ) ಇವೆರಡೇ ಪುರುಷ (ಆತ್ಮ) ಗಳಿರುತ್ತವೆ. ಸರ್ವಾಣಿ – ಎಲ್ಲ; ಭೂತಾನಿ – ಜೀವಿಗಳು, ಕ್ಷರಃ – ನಾಶವಾಗುವಂಥವು. ಕೂಟಸ್ಥಃ – (ಎಲ್ಲ ಜೀವಿಗಳಲ್ಲಿ) ಒಂದೇ ರೀತಿಯಲ್ಲಿ ಇರುವವನು ಅಕ್ಷರಃ – ನಾಶವಿಲ್ಲದವನು.

ಇಡೀ ಜಗತ್ತಿನಲ್ಲಿ ವ್ಯಾಪ್ತವಾಗಿರುವ ಆತ್ಮತತ್ತ್ವವು (ಪುರುಷವು) ಮೂರು ವಿಧವಾಗಿದೆ. ಒಂದು: ಈ ದೇಹದಲ್ಲಿರುವ ಕ್ಷರ ಪುರುಷ. ಕ್ಷರ ಎಂದರೆ ಚಲನಶೀಲ ಮತ್ತು ಸೋರಿ ಹೋಗುವುದು. ಈ ದೇಹದಲ್ಲಿದ್ದು ನಂತರ ಸೋರಿ ಹೋಗುವುದು ಕ್ಷರ ಪುರುಷ. ದೇಹವನ್ನು ಲೋಕ ಅಥವಾ ಪುರ ಎನ್ನುತ್ತಾರೆ, ಕಾರಣ, ಈ ದೇಹದಲ್ಲಿ ನನ್ನ ಜೊತೆ ಕೋಟ್ಯಂತರ ಸೂಕ್ಷ್ಮಜೀವಿ ಬ್ಯಾಕ್ಟೀರಿಯಾಗಳಿವೆ. ಅವುಗಳೂ ನಿರಂತರವಾಗಿ ಹುಟ್ಟಿ ಸಾಯುತ್ತವೆ. ದೇಹದ ಪ್ರತಿಯೊಂದು ಕೋಶದಲ್ಲಿಯೂ ಜೀವವಿದೆ. ಈ ಕೋಶಗಳೂ ಪ್ರತಿಕ್ಷಣ ಹುಟ್ಟುತ್ತವೆ, ಸಾಯುತ್ತವೆ. ದೇಹ ಬಿದ್ದು ಹೋದರೂ ಬ್ಯಾಕ್ಟೀರಿಯಾಗಳು ಕೆಲ ಕಾಲ ತಮ್ಮ ಕೆಲಸ ಮುಂದುವರೆಸುತ್ತವೆ. ಇವುಗಳಲ್ಲಿರುವುದು ಕ್ಷರ ಪುರುಷ. ಇವೆಲ್ಲವನ್ನೂ ಒಂದು ಕಟ್ಟಿನಲ್ಲಿ ಹಿಡಿದಿಟ್ಟುಕೊಳ್ಳುವ ಶಕ್ತಿಯೇ ಅಕ್ಷರ ಪುರುಷ, ಇದು ಎರಡನೆಯದು. ಇದು ದೇಹಕ್ಕೆ ಸೀಮಿತವಾಗಿ ಕೆಲಸ ಮಾಡುತ್ತದೆ. ದೇಹದಿಂದ ಹೊರ ಹೋದಾಗ ಅದು ಪುರುಷೋತ್ತಮನಲ್ಲಿ ಅಂದರೆ ವಿಶಾಲವಾದ ಆತ್ಮತತ್ತ್ವದಲ್ಲಿ ವಿಲೀನವಾಗುತ್ತದೆ.

ಪುರುಷೋತ್ತಮನಿಂದ ಹೊರಹೊಮ್ಮಿದ ಅಕ್ಷರಪುರುಷ ದೇಹದಲ್ಲಿನ ಕ್ಷರ ಪುರುಷಗಳನ್ನು ನಿರ್ದಿಷ್ಟ ಕಾಲ ಪ್ರವರ್ತಿಸುವುದರಿಂದ ಈ ದೇಹ ಕ್ರಿಯಾಶೀಲವಾಗಿರುತ್ತದೆ.


# ಮುಂದಿನ ಪೀಳಿಗೆಗೆ ಒಂದು 'ಅನಂತ' ಮಾದರಿ

**ರಘುನಾಥ ರಾವ್ ಮಲ್ಕಾಪುರೆ**
ಸದಸ್ಯರು, ವಿಧಾನ ಪರಿಷತ್, ಕರ್ನಾಟಕ

ನಾನು ವೃತ್ತಿಯಿಂದ ಸಿವಿಲ್ ಎಂಜಿನಿಯರ್. ಎಬಿವಿಪಿ ಕಾರ್ಯಕರ್ತನಾಗಿ ನಂತರ 1990ರಲ್ಲಿ, ಭಾರತೀಯ ಜನತಾ ಪಕ್ಷದ ಯುವ ಮೋರ್ಚಾ ಮೂಲಕ ರಾಜಕೀಯ ಪ್ರವೇಶ ಪಡೆದೆ.

ಜಿಲ್ಲಾ ಯುವ ಮೋರ್ಚಾದ ಕಾರ್ಯದರ್ಶಿಯಾಗಿದ್ದ ನನ್ನ ಬಗ್ಗೆ ಅನಂತಕುಮಾರರಿಗೆ ಅಭಿಮಾನವಿತ್ತು. ಅವರು 1992ರಲ್ಲಿ, ನನಗೆ ಬೀದರ್ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸ್ಥಾನದ ಜೊತೆಜೊತೆಗೆ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯತ್ವದ ಹೊಣೆಗಾರಿಕೆ ನೀಡಿದರು. ಎರಡನೇ ಅವಧಿಗೂ ನಾನು ಅದೇ ಸ್ಥಾನದಲ್ಲಿ ಮುಂದುವರಿಯಲು ಅವಕಾಶ ನೀಡಿದರು. ಯುವ ಮೋರ್ಚಾದ ರಾಜ್ಯ ಉಪಾಧ್ಯಕ್ಷನಾಗಿ ಮತ್ತು ಅಧ್ಯಕ್ಷನಾಗಿ ಕೆಲಸ ಮಾಡುವ ಅವಕಾಶ ನನಗೆ ದೊರೆಯಿತು. ಈ ಸಂದರ್ಭದಲ್ಲಿ, ಅನಂತಕುಮಾರರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಕರ್ನಾಟಕಕ್ಕೆ ಬಂದರು. ಆಗ ನಾನು ಪಕ್ಷದ ರಾಜ್ಯ ಕಾರ್ಯದರ್ಶಿ. ಮುಂದಿನ ಮೂರು ಅವಧಿಗೂ ನಾನು ಬಿಜೆಪಿ ರಾಜ್ಯ ಕಾರ್ಯದರ್ಶಿಯಾಗಿದ್ದೆ. ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆಗಿದ್ದೆ. ಇಷ್ಟೆಲ್ಲಾ ಸ್ಥಾನಗಳನ್ನು ನಿರ್ವಹಿಸುವಾಗ ನನಗೆ ಮಾರ್ಗದರ್ಶಕರಾಗಿದ್ದವರು, ಅನಂತಕುಮಾರರು.

ನಾನು ಎರಡನೇ ಬಾರಿಗೆ ವಿಧಾನ ಪರಿಷತ್ ಸದಸ್ಯನಾಗಲು ನಾಮಪತ್ರ ಸಲ್ಲಿಸುವಾಗ ನನ್ನೊಡನೆ ಬರುವಂತೆ ಅನಂತಕುಮಾರರಿಗೆ ವಿನಂತಿ ಮಾಡಿದ್ದೆ. ಅವರ ಕಾಯಿಲೆ ಆಗಲೇ ಪತ್ತೆಯಾಗಿತ್ತು; ನಮಗಾರಿಗೂ ಗೊತ್ತಿರಲಿಲ್ಲ. ಅಷ್ಟಾದರೂ ಅನಂತಕುಮಾರರು ನನಗಾಗಿ ವೈನಿಯವರ ಜೊತೆ ಬಂದು, ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ ಮುಗಿಯುವವರೆಗೂ ಇದ್ದರು. ಇದು ಅವರು ಕಾರ್ಯಕರ್ತರ ಮೇಲಿಟ್ಟಿದ್ದ ಪ್ರೀತಿಗೆ ಸಾಕ್ಷಿ.




ಪಕ್ಷವನ್ನು ಬೆಳೆಸಲು ಸಾಮಾಜಿಕ ನ್ಯಾಯದ ಚಿಂತನೆ ಅಗತ್ಯ ಎಂದು ಅನಂತಕುಮಾರರು ಮನಗಂಡಿದ್ದರು. ಅವರ ರಾಜಕೀಯ ಚಾಣಾಕ್ಷತೆಯ ಫಲವಾಗಿ ಜನತಾ ಪರಿವಾರದ ಬಹುತೇಕರು, ಅಂದರೆ ರಮೇಶ್ ಜಿಗಜಿಣಗಿ, ಕೆ.ಬಿ. ಶಾಣಪ್ಪ, ಗೋವಿಂದ ಕಾರಜೋಳ, ಸಿ.ಎಂ. ಉದಾಸಿ ಮುಂತಾದವರು ಬಿಜೆಪಿಗೆ ಬಂದರು. ಕಾಂಗ್ರೆಸ್ಸಿನಿಂದ ಬಂಗಾರಪ್ಪ, ನಂಜೇಗೌಡರು, ಹಾವನೂರು, ಭೈರೇಗೌಡರು ನಮ್ಮ ಜೊತೆ ಬಂದಿದ್ದರು. 2003ರಲ್ಲಿ ಬಿಜೆಪಿಯ 44 ಶಾಸಕರಿದ್ದರು. ಅನಂತಕುಮಾರರ ಅಧ್ಯಕ್ಷತೆಯಲ್ಲಿ ಪಕ್ಷದ 79 ಶಾಸಕರು ಗೆದ್ದರು. ಜೆಡಿಯುನೊಂದಿಗೆ ಒಪ್ಪಂದ ಮಾಡಿಕೊಂಡ ಪರಿಣಾಮ ಬಿಜೆಪಿಯ ಸಂಖ್ಯಾ ಬಲ 84ಕ್ಕೆ ಏರಿತ್ತು. ಆಗ ಬಿಜೆಪಿಯು ಏಕೈಕ ಅತಿ ದೊಡ್ಡ ಪಕ್ಷವೆನಿಸಿಕೊಂಡಿತ್ತು.

ಅನಂತಕುಮಾರರು ಅಧ್ಯಕ್ಷರಾದ ತಕ್ಷಣ, ಎಲ್ಲರೂ ಮಾಡುವಂತೆ ಕಚೇರಿ ಪದಾಧಿಕಾರಿಗಳನ್ನು ನೇಮಿಸುವ ಬದಲು ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದರು. ಅವರ ಕಾರ್ಯವೈಖರಿ, ಅವರ ಐಡಿಯಾಗಳು, ಅವರದ್ದೇ ಆದ ಪದ್ಧತಿ - ಇವುಗಳನ್ನು ಬೇರೆ ಯಾರಲ್ಲೂ ನಾವು ಕಾಣಲಾರೆವು. ಸಂಘಟನೆ, ಹೋರಾಟಗಳ ಬಗ್ಗೆ ಅನಂತಕುಮಾರರೇ ನಮಗೆ ಗುರುಗಳು. ಅವರು ಕರ್ನಾಟಕದ ಮುಖ್ಯಮಂತ್ರಿಯಾಗಬೇಕೆಂಬ ಕಾರ್ಯಕರ್ತರ ಹಂಬಲ ಈಡೇರುವ ಮುನ್ನವೇ ನಮ್ಮಿಂದ ದೂರವಾದರು.

ಅವರಿಗೆ ಮುಖ್ಯಮಂತ್ರಿಯಾಗುವ ಬಯಕೆಯೇನೋ ಇತ್ತು. ಅವರಿಗೆ ಯೋಗ್ಯತೆಯೂ, ಅರ್ಹತೆಯೂ ಇತ್ತು. ಆದರೆ ಯೋಗ ಕೂಡಿ ಬರಲಿಲ್ಲ. ಬಿಜೆಪಿಯ 84 ಸೀಟುಗಳಿದ್ದವು. ಜನತಾ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲೂ ಪ್ರಯತ್ನಿಸಿದ್ದೆವು. ಆದರೆ, ನಮ್ಮ ಶಾಸಕಾಂಗ ಪಕ್ಷದ ನಾಯಕರೂ ಆಯ್ಕೆಯಾಗಿರಲಿಲ್ಲ. ಈ ವಿಳಂಬವೇ ಬಹು ದೊಡ್ಡ ಸಮಸ್ಯೆ ತಂದಿಟ್ಟಿತ್ತು. ಸಿದ್ಧರಾಮಯ್ಯನವರೊಂದಿಗೆ ತೆರೆಮರೆಯ ಮಾತುಕತೆ ನಡೆಯುತ್ತಿತ್ತು. ಇದು ದೇವೇಗೌಡರಿಗೆ ತಿಳಿದು ಅವರು ತಕ್ಷಣವೇ ಕಾಂಗ್ರೆಸ್ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಿದ್ಧರಾಮಯ್ಯನವರನ್ನು ಉಪಮುಖ್ಯಮಂತ್ರಿಯಾಗಿ ಮಾಡಲು ಒಪ್ಪಿದರು.

ರಾಜಕಾರಣದ ಪ್ರತಿಯೊಂದು ಹಂತದಲ್ಲಿಯೂ ಬೆಂಬಲ ಮತ್ತು ವಿರೋಧ ಇದ್ದೇ ಇರುತ್ತದೆ. ಬೆಂಬಲ ದೊರೆತಾಗ ಸ್ವೀಕರಿಸಬೇಕು; ವಿರೋಧ ಇದ್ದಾಗ ಸ್ಪರ್ಧಾತ್ಮಕವಾಗಿ ಎದುರಿಸಬೇಕು. ರಾಜಕೀಯದಲ್ಲಿ ಇದು ಅನಿವಾರ್ಯ. ಇಂತಹ ಸನ್ನಿವೇಶಗಳನ್ನು ಅನಂತಕುಮಾರರು ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತಿದ್ದರು. ಅದಕ್ಕೆ ಬೇಕಾದ ಕಾರ್ಯತಂತ್ರ, ಯುಕ್ತಿ ಹಾಗೂ ಛಲಗಾರಿಕೆ ಅವರಲ್ಲಿತ್ತು. ಅಟಲ್‌ಜೀ, ಅದ್ವಾನಿ, ಪ್ರಮೋದ ಮಹಾಜನ್ ಮುಂತಾದ ಹಿರಿಯ ನಾಯಕರ ಬೆಂಬಲ ಅನಂತಕುಮಾರರಿಗೆ ಸದಾ ಇದ್ದೇ ಇರುತ್ತಿತ್ತು. ಅವರ ರಾಜಕೀಯ ತಂತ್ರಗಾರಿಕೆ ಮತ್ತು ಅವರು ಕೆಲಸ ಮಾಡುವ ಕಾರ್ಯವೈಖರಿಯನ್ನು ಹಿರಿಯರೆಲ್ಲ ಮೆಚ್ಚಿಕೊಂಡಿದ್ದರು. ಯಡಿಯೂರಪ್ಪನವರು ಕೆಜೆಪಿ ಕಟ್ಟಿ ಚುನಾವಣೆಯನ್ನು ಎದುರಿಸಿದಾಗ ಬಿಜೆಪಿ ಕೇವಲ ನಲವತ್ತು ಸ್ಥಾನಗಳಿಗೆ ತೃಪ್ತಿ ಪಡಬೇಕಾಯಿತು. ಕೆಜೆಪಿಯಿಂದ ಯಡಿಯೂರಪ್ಪನವರಿಗೆ ನಿರೀಕ್ಷಿತ ಲಾಭವಾಗದಿದ್ದರೂ ಬಿಜೆಪಿಗೆ ಅಪಾರ ಹಾನಿಯುಂಟಾಯಿತು. "ದೇಶ ಮೊದಲು, ಪಕ್ಷ ನಂತರ ಮತ್ತು ವ್ಯಕ್ತಿ ಕೊನೆಗೆ" ಎಂಬ ತತ್ತ್ವವನ್ನು ನಂಬಿದ ನಾವು ಅನೇಕರು ಕೆಜೆಪಿಗೆ ಹೋಗಿರಲಿಲ್ಲ. ಯಡಿಯೂರಪ್ಪನವರು ಪಕ್ಷವನ್ನು ತೊರೆದು ಕೆಜೆಪಿ ಕಟ್ಟಿದಾಗ ಅನಂತಕುಮಾರರು ಅಪಾರ ನೋವು ಅನುಭವಿಸಿದ್ದರು. ಅವರಿಬ್ಬರ ನಡುವೆ ಭಿನ್ನಾಭಿಪ್ರಾಯಗಳಿದ್ದವೇನೋ ನಿಜ. ಹಾಗೆ ನೋಡಿದರೆ ಅದ್ವಾನಿ ಮತ್ತು ವಾಜಪೇಯಿಯವರ ನಡುವೆ ಕೂಡ ಭಿನ್ನಾಭಿಪ್ರಾಯವಿತ್ತು. ಅನಂತಕುಮಾರರು ಯಡಿಯೂರಪ್ಪನವರನ್ನು ಪ್ರತಿಸ್ಪರ್ಧಿಯಂತೆ ನೋಡಿರಲಿಲ್ಲ. ಎಲ್ಲ ರಾಜಕೀಯ ವ್ಯಕ್ತಿಗಳಿಗಿರುವ ಮಹತ್ವಾಕಾಂಕ್ಷೆ ಅನಂತಕುಮಾರರಿಗೂ ಇತ್ತು. ಅದು ತಪ್ಪಲ್ಲ; ಅದು ಮಾನವ ಸಹಜ ಗುಣ.

ರಾಜಕಾರಣದಲ್ಲಿ ಆಸಕ್ತಿ ವಹಿಸುವ ಯುವಕರು ಅನಂತಕುಮಾರರ ಜೀವನದಿಂದ ಕಲಿಯುವುದು ಸಾಕಷ್ಟಿದೆ. ಇಲ್ಲಿ ಸಂದರ್ಭಾನುಸಾರ ಸ್ಥಾನಮಾನಗಳು ದೊರೆಯುತ್ತವೆ, ಆದರೆ ನಾನೇ ನಾಯಕನಾಗಬೇಕು ಎಂದು ಬರುವವರಿಗೆ ಕಷ್ಟ ಎದುರಾಗುವುದು ನಿಶ್ಚಿತ. ರಾಜಕೀಯ ಕ್ಷೇತ್ರಕ್ಕೆ ಕೆಲಸ ಮಾಡಲು ಬಯಸುವವರಿಗೆ ಹಿರಿಯ ನಾಯಕರ ಹಿನ್ನೆಲೆ ತಿಳಿದಿರಬೇಕು. ಸಂಘದ ನಿಷ್ಠೆ, ಸಂಘದ ಸಂಸ್ಕಾರ ಹಾಗೂ ಸಂಘದ ತರಬೇತಿ, ನಂತರ ಅನಂತಕುಮಾರ್ ರಾಜಕೀಯದಲ್ಲಿ ಸೃಷ್ಟಿಮಾಡಿಕೊಂಡ ಅವಕಾಶಗಳು, ಅವರ ಪರಿಶ್ರಮ, ಸಂಘಟನೆಯ ಕಾರ್ಯವೈಖರಿ ಮತ್ತು ಹೋರಾಟದ ಪ್ರತಿಫಲವಾಗಿ ಅವರು ಇಷ್ಟೆತ್ತರಕ್ಕೆ ಬೆಳೆದರೇ ವಿನಃ, ಅವರಿಗೆ ಬೇರೆ ಯಾವುದೇ 'ವಿಶೇಷ' ಹಿನ್ನೆಲೆ ಇರಲಿಲ್ಲ. ರಾಜಕೀಯ ಎಂದರೆ ಏನು, ಎತ್ತ ಎಂದು ತಿಳಿಯಲು ಬಯಸುವ ಯುವಕರು ಅವರ ಚರಿತ್ರೆಯನ್ನು ಅಧ್ಯಯನ ಮಾಡಬೇಕು. ಅನಂತಕುಮಾರರು ಮುಂದಿನ ಪೀಳಿಗೆಗೆ ಒಂದು ಆದರ್ಶ ಮಾದರಿ ಎಂದು ಸಂಕೋಚವಿಲ್ಲದೆ ಹೇಳಬಹುದು.

ಅನಂತಕುಮಾರರ ನಿಧನದಿಂದಾಗಿ ರಾಜ್ಯ ರಾಜಕೀಯಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರಂತೆ ಸರಳ, ಸಂಘಟನಾ ಚಾತುರ್ಯ, ಹೊಂದಿದ ಇನ್ನೊಬ್ಬ ವ್ಯಕ್ತಿಯನ್ನು ನಾವು ರಾಜ್ಯದಲ್ಲಿ ಕಾಣಲಾರೆವು. ಇವತ್ತು, ನಮ್ಮ ರಾಜ್ಯದಲ್ಲಿ ಬಹಳ ಅನಿಶ್ಚಿತ ಸಂದರ್ಭಗಳನ್ನು ಎದುರಿಸುತ್ತಿದ್ದೇವೆ. ರಾಜ್ಯ ವಿಧಾನಸಭೆಯಲ್ಲಿ ನಾವು ವಿರೋಧ ಪಕ್ಷದಲ್ಲಿ ಕೂತಿದ್ದೇವೆ. ಎರಡೂ ಸದನಗಳ ಒಂದು ಅಧಿವೇಶನ ಮುಗಿದರೂ ವಿರೋಧಪಕ್ಷದ ನಾಯಕರ ಆಯ್ಕೆಯಾಗಿಲ್ಲ. ಅನಂತಕುಮಾರರು ಇದ್ದಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲವೇನೋ! ಕೇಂದ್ರ ಮತ್ತು ರಾಜ್ಯ ರಾಜಕೀಯದಲ್ಲಿ ಅನಂತಕುಮಾರರಿಗೆ ಹಿಡಿತವಿತ್ತು ಎಂಬ ದೃಷ್ಟಿಯಿಂದ ಮಾತ್ರ ನಾನು ಈ ಮಾತು ಹೇಳುತ್ತಿದ್ದೇನೆ. ಅನಂತಕುಮಾರ್ ಅಮರರಾಗಲಿ!



# ಶೂನ್ಯದಿಂದ ಅನಂತದೆಡೆಗೆ..

**ಪ್ರೊ. ಶ್ರೀನಿವಾಸ ಬಳ್ಳಿ**
ಕುಲಪತಿ, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು

ಅನಂತಕುಮಾರರು ಶೂನ್ಯದಿಂದ ಅನಂತದವರೆಗೆ ಹೇಗೆ ವ್ಯಾಪಿಸಬಹುದು ಎನ್ನುವುದನ್ನು ಸಾಧಿಸಿ ತೋರಿಸಿದ ಒಬ್ಬ ಯುವ ನೇತಾರ. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತು ಮತ್ತು ಭಾರತೀಯ ಜನತಾ ಪಕ್ಷಗಳಲ್ಲಿ ಇವರು ನಿರ್ವಹಿಸಿದ ಪಾತ್ರಗಳೇ ಇದಕ್ಕೆ ಸಾಕ್ಷಿ. ಒಂದು ಸಂಘಟನೆಯನ್ನು ಶೂನ್ಯದಿಂದ ಪ್ರಾರಂಭಿಸಿ ಅನಂತದವರೆಗೆ ವಿಸ್ತರಿಸಿದ ಅವರ ಕಾರ್ಯಕ್ಷಮತೆ ಅನುಕರಣೀಯ. 'ಅನಂತ' ಎಂಬ ಹೆಸರಿಗೆ ಅನ್ವರ್ಥವಾಗಿ ಬದುಕಿದ ಅನಂತಕುಮಾರರು ನಮ್ಮ ಕಾಲದ ಶ್ರೇಷ್ಠ ನಾಯಕರು.

ಸಂಘಟನೆಗಳನ್ನು ಬೆಳೆಸಲು ಅವರು ಯಾವುದೇ ವಾಮಮಾರ್ಗವನ್ನು ಅನುಸರಿಸಲಿಲ್ಲ; ಅವರ ಮಾರ್ಗ ನೇರ ಹಾಗೂ ನಿಚ್ಚಳವಾಗಿತ್ತು ಎಂಬುದು ಗಮನಾರ್ಹ. ಬಹುಶಃ, ತುರ್ತು ಪರಿಸ್ಥಿತಿಯ ನಂತರದ ಕರ್ನಾಟಕದ ಯುವ ಆಂದೋಳನಗಳು ಹಾಗೂ ನಂತರದ ರಾಜಕೀಯದ ಇತಿಹಾಸವನ್ನು ದಾಖಲಿಸುವಾಗ ಅನಂತಕುಮಾರರ ಹೆಸರನ್ನು ಬಿಟ್ಟು ಬರೆಯುವುದು ಮೂರ್ಖತನವಾದೀತು! ವಿದ್ಯಾರ್ಥಿಗಳಿಗೆ ಸಾಮೂಹಿಕ ಹೋರಾಟದ ಅನಿವಾರ್ಯತೆಯನ್ನು ಮನದಟ್ಟು ಮಾಡಿಸಿ ಅವರನ್ನು ದೊಡ್ಡದೊಡ್ಡ ಆಂದೋಳನಗಳಲ್ಲಿ ತೊಡಗಿಸಿದ ಅನಂತಕುಮಾರರು ರಾಜಕೀಯದಲ್ಲೂ ಗುರುತಿಸಬಹುದಾದ ಪರಿವರ್ತನೆ ತಂದಿದ್ದಾರೆ.

ಕರ್ತೃತ್ವದ ಮೂಲಕ ವ್ಯಕ್ತಿತ್ವವನ್ನು ಬೆಳೆಸಿಕೊಂಡರೆ ನೇತೃತ್ವ ತಾನೇ ತಾನಾಗಿ ಬರುತ್ತದೆ ಎಂಬುದು ಅನಂತಕುಮಾರರ ಅಚಲ ನಂಬಿಕೆ; ಅದೇ ಅವರ ಬಂಡವಾಳವೂ ಆಗಿತ್ತು. ತಮ್ಮ ಕ್ರಿಯಾಶೀಲತೆಗೆ ಪೂರಕವಾಗಿ ಅವರು ದೇಶಾದ್ಯಂತ ಸತತವಾಗಿ ಪ್ರವಾಸ ಮಾಡಿ ಎಬಿವಿಪಿ ಹಾಗೂ ಬಿಜೆಪಿ ಸಂಘಟನೆಗಳ ಕೆಲಸ ಮಾಡಿದರು. ಅವರು ಅಳವಡಿಸಿಕೊಂಡ ಮೌಲ್ಯಗಳು ಮತ್ತು ಸಾಮಾಜಿಕ ಕಳಕಳಿ ಅವರ ಒಟ್ಟು ಬದುಕನ್ನು ಪ್ರತಿನಿಧಿಸುತ್ತವೆ.

ಅನಂತಕುಮಾರ್ ಪ್ರಯೋಗಶೀಲ ಚಿಂತಕರು. ತತ್ತ್ವಗಳನ್ನು, ಮೌಲ್ಯಗಳನ್ನು ನಿತ್ಯ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು; ಸಾಮಾನ್ಯ ಜನರಿಗೆ ಅವುಗಳನ್ನು ಹೇಗೆ ತಲುಪಿಸಬೇಕು; ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಅವುಗಳ ಪ್ರಯೋಜನ ತಲುಪುವಂತಾಗಲು ಏನು ಮಾಡಬೇಕು ಎಂಬ ವಿಚಾರಗಳ ಬಗ್ಗೆ ಸದಾ ಚಿಂತಿಸುತ್ತಿದ್ದ ಅವರು, ಅದಕ್ಕೆ ತಕ್ಕುದಾದ ಕಾರ್ಯಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಹೀಗಾಗಿ, ಅವರಿಗೆ ಸರ್ವಸ್ಪರ್ಶಿ ಕಾರ್ಯ ಮಾಡಲು ಸಾಧ್ಯವಾಯಿತು. ಸಮಾಜದ ಎಲ್ಲ ರೀತಿಯ ಜನರನ್ನು, ವರ್ಗಗಳನ್ನು ಹಾಗೂ ಎಲ್ಲ ಆಯಾಮಗಳನ್ನು ತಲುಪಲು ಅವರಿಗೆ ಸಾಧ್ಯವಾಯಿತು.

ಮಹಾಭಾರತದಲ್ಲಿ, ಅದರಲ್ಲೂ ವಿಶೇಷವಾಗಿ, ಭಗವದ್ಗೀತೆಯಲ್ಲಿ ಅವರಿಗೆ ಅದಮ್ಯ ವಿಶ್ವಾಸವಿತ್ತು. ಅದನ್ನು ನಿತ್ಯ ಪಠಿಸುತ್ತಿದ್ದರು. ಆಧುನಿಕ ತಂತ್ರಜ್ಞಾನದ ಜೊತೆ ಅಭಿವೃದ್ಧಿಯ ಗತಿ ಬಗ್ಗೆಯೂ ಕಾಳಜಿ ಅವರಿಗಿತ್ತು. ಬೆಂಗಳೂರಿನ ಮೆಟ್ರೋ ಅದಕ್ಕೊಂದು ಸ್ಪಷ್ಟ ನಿದರ್ಶನ. ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಅವರ ದೂರದರ್ಶಿ, ಜನಹಿತ ಚಿಂತನೆಗಳಿಗೆ ಸ್ಪಷ್ಟ ನಿದರ್ಶನವಾಗಿದೆ.

ಅನೇಕ ಬಾರಿ ನಾವು ಮಾತನಾಡುತ್ತ ನಿಂತಿದ್ದಾಗ ಯಾರಾದರೂ ಬಂದು ಧನಸಹಾಯ ಕೇಳಿದರೆ ಜೇಬಿಗೆ ಕೈ ಹಾಕಿ ಕೈಗೆ ಬಂದಷ್ಟು ಹಣ ಕೊಟ್ಟುಬಿಡುತ್ತಿದ್ದುದನ್ನು ನಾವು ನೋಡಿದ್ದೇವೆ. ಎಷ್ಟಿದೆ ಎಂದು ಲೆಕ್ಕ ಮಾಡದೆ ಕೊಡುತ್ತಿದ್ದರು. ಬಡವರ ನೋವನ್ನು ಸಹಿಸಲಾಗದ ಮೃದು ಅಂತಃಕರಣ ಅವರದು. ಕೇಂದ್ರದಲ್ಲಿ ರಸಗೊಬ್ಬರ ಹಾಗೂ ರಾಸಾಯನಿಕ ಖಾತೆ ಸಚಿವರಾಗಿದ್ದಾಗ ಅನಂತಕುಮಾರ್ ಜಾರಿಗೆ ತಂದ ಜನೌಷಧಿ, ಬೇವುಲೇಪಿತ




'ಅನಂತಪಥ' ಮಾಸಪತ್ರಿಕೆಯ 37ನೇ ಸಂಚಿಕೆಯನ್ನು ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಡಾ. ಶ್ರೀನಿವಾಸ ಬಳ್ಳಿ ಅವರು ಬಿಡುಗಡೆ ಮಾಡಿದರು

ಯೂರಿಯಾ, ಜೈವಿಕ ಗೊಬ್ಬರಕ್ಕೆ ಆದ್ಯತೆ ಮುಂತಾದ ಕ್ರಾಂತಿಕಾರಿ ಉಪಕ್ರಮಗಳಿಗೆ ಅನಂತಕುಮಾರ್ ಸಮಾಜದ ದೀನವರ್ಗಗಳ ಬಗೆಗೆ ಹೊಂದಿದ್ದ ಅನುಕಂಪ ಕಾಳಜಿಗಳೇ ಮುಖ್ಯಕಾರಣವೆನ್ನಬಹುದು.

ತಾವು ನಂಬಿದ 'ದೇಶ ಮೊದಲು' ಎಂಬ ತತ್ತ್ವಕ್ಕನುಗುಣವಾಗಿ, ಕೇಂದ್ರ ಮತ್ತು ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳ ಸರ್ಕಾರ ಇದ್ದರೂ, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಅವರೆಂದೂ ರಾಜಕೀಯ ಮಾಡಲಿಲ್ಲ ಎಂಬುದು ಗಮನಾರ್ಹ. ಅವರು ಕೇಂದ್ರ ಹಾಗೂ ರಾಜ್ಯಗಳ ನಡುವಿನ ಅತ್ಯಂತ ಸಮರ್ಥವಾದ ಕೊಂಡಿಯಾಗಿದ್ದರು. ಸಮಾಜದಲ್ಲಿ ನೈತಿಕ ಮೌಲ್ಯಗಳ ಮರುಪ್ರತಿಷ್ಠಾಪನೆ, ಅವರ ಮನಸ್ಸಿನಲ್ಲಿ ಸದಾ ಕಾಡುತ್ತಿದ್ದ ಸಂಗತಿಯಾಗಿತ್ತು. ಜೀವನದ ಮೌಲ್ಯಗಳು ಅಧಃಪತನಗೊಳ್ಳುತ್ತಿರುವ ಸಂದರ್ಭದಲ್ಲಿ ಭಾರತೀಯ ಹಿಂದೂ ಸನಾತನ ಧರ್ಮದ ಮೌಲ್ಯಗಳ ಮರುಪ್ರತಿಷ್ಠಾಪನೆಯಾದಾಗ ಮಾತ್ರ ಸಮಾಜದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ ಎಂಬುದು ಅವರ ಆಶಯವಾಗಿತ್ತು. ನಾವು ಈ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಮೊದಲು ಅಳವಡಿಸಿಕೊಂಡರೆ ಸಮಾಜಕ್ಕೆ ಹೇಳಲು ಬಲ ಮತ್ತು ಹಕ್ಕು ಬರುತ್ತದೆ ಎಂಬುದು ಅವರ ವಿಚಾರವಾಗಿತ್ತು.

'ಯಾವುದೇ ಸಂಘಟನೆಯು ಅತ್ಯಂತ ಗಣನೀಯ ಸಾಧನೆ ಮಾಡಬೇಕಾದರೆ ಅದರಲ್ಲಿ ಶಿಸ್ತು ಇರಬೇಕಾದದ್ದು ಅವಶ್ಯಕ' ಎಂದೇ ನಂಬಿದ್ದ ಅನಂತಕುಮಾರರು ಎಬಿವಿಪಿ ಹಾಗೂ ಬಿಜೆಪಿ ಸಂಘಟನೆಯಲ್ಲಿ ಇದನ್ನೇ ಸಾಧಿಸಿ ತೋರಿಸಿದರು. ಆ ಚೇತನದ ಕಾರಣದಿಂದಲೇ ನಮಗೆಲ್ಲ ಇವತ್ತು ಸಮಾಜಮುಖಿಯಾಗಿ ಯೋಚಿಸಿ, ಕೆಲಸ ಮಾಡುವುದರಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಲು ಪ್ರೇರಣೆಯಾಗುತ್ತಿದೆ. ಇದೇ ಅವರಿಗೆ ಸಲ್ಲಿಸಬೇಕಾದ ನೈಜ ಶ್ರದ್ಧಾಂಜಲಿ. ಅನಂತಕುಮಾರರ ಪತ್ನಿ ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಸಹ 'ಅದಮ್ಯ ಚೇತನ' ಸಂಸ್ಥೆಯ ಮೂಲಕ ಪತಿಯ ಸೇವಾ ಆಶಯಗಳನ್ನು ಪೂರೈಸುವಲ್ಲಿ ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ.

'ಅನಂತಪಥ' ಮಾಸಪತ್ರಿಕೆಯ ಯಾನ ನಿರಂತರವಾಗಿರಲಿ, ಅನಂತಕುಮಾರರ ಧ್ಯೇಯ-ಉದ್ದೇಶಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಯ ವರೆಗೆ ಒಯ್ಯಲಿ - ಎಂದು ನಾನು ಆಶಿಸುತ್ತೇನೆ.

## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Venkatesh Manu**
Inputs: **Beluru Sudarshana / Poornaprajna / Srikanth K / Sujatha GT**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **Dr. Srinivas Balli / Chaya Bapat / G M Inamdar**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in


ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಪ್ರೊ. ಪಿ. ವಿ. ಕೃಷ್ಣಭಟ್ಟರ ವಿಶ್ವರೂಪ ದಾಖಲಿಸುವ 'ಪಥದರ್ಶಿ'

## ಪುಸ್ತಕ ಪರಿಚಯ

ನಾವು ಅನೇಕ ಆತ್ಮಚರಿತ್ರೆಗಳನ್ನು ಓದಿದ್ದೇವೆ. ಅವೆಲ್ಲ, ವ್ಯಕ್ತಿಗಳು ತಮ್ಮನ್ನು ತಾವೇ ನೋಡಿಕೊಂಡು ಬರೆದ ಚರಿತ್ರೆಗಳು. ವ್ಯಕ್ತಿಗಳ ಕುರಿತು ಅನ್ಯರು ಬರೆದ ಪುಸ್ತಕಗಳೂ ವ್ಯಕ್ತಿತ್ವದ ಅನೇಕ ಮಗ್ಗುಲುಗಳನ್ನು ಸ್ಪರ್ಶಿಸುವುದು ಸಾಧ್ಯವಿಲ್ಲ. ವ್ಯಕ್ತಿಯು ತನ್ನ ಬಗ್ಗೆ ಬರೆದುಕೊಂಡಿರುವುದರ ಜೊತೆಗೆ ಅನೇಕರು ಅವರನ್ನು ತಾವು ಕಂಡಂತೆ ಬಣ್ಣಿಸಿ ಬರೆದರೆ ಮಾತ್ರ ವ್ಯಕ್ತಿತ್ವದ ಸಮಗ್ರದರ್ಶನವಾದೀತು!

ಒಬ್ಬ ವ್ಯಕ್ತಿಯಲ್ಲಿ ಎಷ್ಟು ಗುಣಗಳಿರಬಹುದು? ಕುಟುಂಬಜೀವಿ, ಪ್ರೇರಕ, ಕ್ರಿಯಾಶೀಲ, ಪಂಡಿತ, ಗುರು, ಗೆಳೆಯ, ತತ್ತ್ವದರ್ಶಿ, ಶಿಸ್ತುಗಾರ, ದೂರದೃಷ್ಟಿ, ಗಟ್ಟಿತನ, ಹೋರಾಟಗಾರ, ಸಂಘಟಕ, ತರಬೇತುದಾರ, ಸಮಾಜ ಚಿಂತಕ, ಆಧುನಿಕ ಋಷಿ, ಸಂತ, ಕರುಣಾಮಯಿ, ಪರಿಸರ ಪ್ರೇಮಿ, ಆದರ್ಶದ ದೀಪಸ್ತಂಭ, ದೀವಿಗೆ, ಅಂತರಂಗದ ಸಾಕ್ಷಿಪ್ರಜ್ಞೆ, ಕೈಯ ಕಂದೀಲು, ಸಾತ್ವಿಕ, ಸಾಧಕ, ಕಾಯಕಯೋಗಿ, ಸ್ನಿಗ್ಧ ಸತ್ವಮೂರ್ತಿ, ಸರಳ, ಸಜ್ಜನ, ಸಮಾಜ ವಿಜ್ಞಾನಿ, ಧೈರ್ಯಶಾಲಿ, ಸಮಚಿತ್ತದ ವ್ಯಕ್ತಿ – ಈ ಎಲ್ಲ ಗುಣಗಳ ಪಟ್ಟಿಯನ್ನು ಮಾಡಿದ್ದು ಪ್ರೊ. ಪಿ. ವಿ. ಕೃಷ್ಣಭಟ್ಟರ ಆತ್ಮೀಯರು. ಈ ಎಲ್ಲ ಗುಣಗಳೂ ಸಂಗಮಿಸಿರುವ ಭಟ್ಟರ ಬಗ್ಗೆ ಒಬ್ಬಿಬ್ಬರು ಬರೆದರೆ ಅದು ಸಮಗ್ರ ಚಿತ್ರಣವನ್ನು ಕೊಟ್ಟೀತೆ? ಇದನ್ನು ಮನಗಂಡೇ ಗುಣವಾರಿಧಿ, ಅಪರೂಪದ ಸಂತ, ಪ್ರೊ. ಪಿ. ವಿ. ಕೃಷ್ಣಭಟ್ಟರ ಬಗ್ಗೆ ನೂರಕ್ಕೂ ಹೆಚ್ಚು ಜನರು ಆತ್ಮೀಯವಾಗಿ ಬರೆದ ಲೇಖನಗಳ ಸಂಗ್ರಹ, 'ಪಥದರ್ಶಿ' ಎಂಬ ೩೫೨ ಪುಟಗಳ ಪುಸ್ತಕ ಪ್ರಕಟವಾಗಿದೆ.




ಪುಸ್ತಕದ ಕೊನೆಯಲ್ಲಿ ೨೫೭ನೇ ಪುಟದಿಂದ ೩೧೪ನೇ ಪುಟದ ವರೆಗೆ ಪ್ರಶ್ನೆಗಳಿಗೆ ಉತ್ತರವೆಂಬಂತೆ ಭಟ್ಟರೇ ತಮ್ಮ ಜೀವನದ ಬಗ್ಗೆ ಬರೆದ ವಿವರಗಳಿವೆ. ಮೊದಲಿಗೇ ಅದನ್ನು ಓದಿದರೆ 'ಇಷ್ಟೇನಾ?' ಎಂದು ಸ್ವಪ್ರತಿಷ್ಠೆಯ ಜನರಿಗೆ ಅನ್ನಿಸಬಹುದು. ಆದರೆ, ಅವರ ಆತ್ಮೀಯರು ಬರೆದ ಲೇಖನಗಳನ್ನು ಓದಿದ ನಂತರ ಓದಿದರೆ 'ತಮ್ಮ ಬಗ್ಗೆ ಹೇಳಿಕೊಳ್ಳಲು ಬಾರದ ಸಂಕೋಚದ ವ್ಯಕ್ತಿ' ಎಂದನ್ನಿಸಿದರೆ ಆಶ್ಚರ್ಯವಲ್ಲ. ಆದುದರಿಂದ ಲೇಖನಗಳನ್ನು ಅನುಕ್ರಮಣಿಕೆಯಂತೆಯೇ ಓದುವುದು ಒಳ್ಳೆಯದು.

ಮೊದಲ ೩೬ ಪುಟಗಳಲ್ಲಿ ಭಟ್ಟರ ಪತ್ನಿ, ಮಕ್ಕಳು, ಅಳಿಯಂದಿರು, ತಂಗಿಯಂದಿರು, ಸೋದರ ಸಂಬಂಧಿಗಳು ಮುಂತಾದ ಕುಟುಂಬಸ್ಥರೇ ಬರೆದ ಲೇಖನಗಳಿವೆ. ಅವರ ಕೌಟುಂಬಿಕ ಜೀವನ, ಶಿಷ್ಯವಾತ್ಸಲ್ಯ, ಬಂಧನ, ಜೈಲುವಾಸ ಮುಂತಾದ ಅನೇಕ ವಿಷಯಗಳ ಬಗ್ಗೆ ಕುಟುಂಬಸ್ಥರ ಲೇಖನಗಳನ್ನು ಓದುವುದರಿಂದ ಒಂದು ಹೊಸಲೋಕದಲ್ಲಿ ಪ್ರಯಾಣ ಪ್ರಾರಂಭಿಸಿದ ಅನುಭವ ಉಂಟಾಗುತ್ತದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾತ್ರಿಯ ಹೊತ್ತು ಪೋಲೀಸರು ಮನೆಗೆ ಬಂದು ಭಟ್ಟರನ್ನು ಬಂಧಿಸಿದ ನಾಟಕೀಯತೆಯನ್ನು ಮೀರಿದ ಕರಾಳತೆಯ ದರ್ಶನವನ್ನು ಭಟ್ಟರ ಸೋದರ ಮಾವನ ಮಗ ಶೇಷಾದ್ರಿಯವರು ಬರೆದ ಲೇಖನ ಮಾಡಿಸುತ್ತದೆ. ವಿಶ್ವಕುಟುಂಬಿಯು ತನ್ನ ಸ್ವಂತ ಕುಟುಂಬವನ್ನು ನಡೆಸಿಕೊಂಡ ಪರಿ ಸಾರ್ವಜನಿಕ ಜೀವನದಲ್ಲಿದ್ದುಕೊಂಡು ಕುಟುಂಬವನ್ನು ನಿರ್ಲಕ್ಷಿಸುವ ಜನರಿಗೆ ಕೈದೀವಿಗೆಯಂತೆ ನೆರವಾಗುತ್ತದೆ.

ಶತಾವಧಾನಿ, ಆರ್ ಗಣೇಶರು "ನಿರಂತರ ಪ್ರವಾಸ, ಜನಸಂಪರ್ಕ, ಸಂಘಟನೆ, ವಿವಿಧ ಪ್ರಕಲ್ಪಗಳ ಯೋಜನೆ ಹಾಗೂ ಅವುಗಳ ಸಾಧನೆಯಲ್ಲಿ ತೊಡಗಿರುತ್ತಿದ್ದ ಭಟ್ಟರ ವ್ಯಕ್ತಿತ್ವ ಇಂಥ ವ್ಯಾಪಕ ಲೋಕಸೇವೆಯನ್ನು ಕೈಗೊಂಡ ಎಷ್ಟೋ ಮಂದಿಗಿಂತ ಭಿನ್ನ ಹಾಗೂ ವಿಶಿಷ್ಟ" ಎಂದು ಬರೆದಿದ್ದಾರೆ. ಅವರು ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರದಲ್ಲಿ ಭಟ್ಟರ ಪಾತ್ರವನ್ನು ವಿವರವಾಗಿ ದಾಖಲಿಸಿರುವ ಪರಿ, ಭಟ್ಟರ ಅಪರೂಪದ ಮುಖವನ್ನು ತೆರೆದು ತೋರಿಸುತ್ತದೆ. ಈ ವಿವರಗಳನ್ನು ಶ್ರೀ ಗಣೇಶ್ ದಾಖಲಿಸಿರದಿದ್ದರೆ ಅವೆಲ್ಲವೂ ಶಾಶ್ವತವಾಗಿ ತೆರೆಮರೆಯಲ್ಲಿಯೇ ಉಳಿಯುತ್ತಿದ್ದವು. ಈ ಸಂಗತಿಯನ್ನೂ ಗಣೇಶರೇ ಗುರುತಿಸಿದ್ದಾರೆ. 'ಬರಗೆಟ್ಟ ನಮಗೆ ಅವರ ಮನೆಯ ಭೇಟಿ ಆಹ್ಲಾದಕರವಾಗಿರುತ್ತಿತ್ತು' ಎಂಬ ಪ್ರಭಾಕರ ಕಾರಂತರ ಮಾತನ್ನು ಓದಿದಾಗ ಭಟ್ಟರು ಸಾಮಾನ್ಯರಲ್ಲಿ ಸಾಮಾನ್ಯರನ್ನು ಗುರುತಿಸಿ ಅಸಾಮಾನ್ಯ ಕೆಲಸದಲ್ಲಿ ತೊಡಗಿಸಿದರು ಎಂಬ ಅರಿವು ಮೂಡುತ್ತದೆ. ಸಂಗೀತದ ಪ್ರಾವೀಣ್ಯವನ್ನು ಗಳಿಸಲು ಹನುಮಂತನ ಕತೆ ಹೇಳಿ ರಂಜನೆಯ ಜೊತೆಗೆ ಸಂದೇಶ ರವಾನೆಯ ಪಾಠವನ್ನು ಮಾಡಿದ ಸಂಗತಿಯನ್ನು ಡಾ. ರಾ. ಸ. ನಂದಕುಮಾರ ಬರೆದಿದ್ದಾರೆ. 'ಯಃ ಕ್ರಿಯಾವಾನ್ ಸಃ ಪಂಡಿತಃ' ಎಂದು ದತ್ತಾತ್ರೇಯ ಹೊಸಬಾಳೆ, 'ಪಿವಿಕೆ ಎದುರು ಸಮಯ ಸ್ತಬ್ಧವಾಗುತ್ತಿತ್ತು' ಎಂದು ಜಿ. ಆರ್. ಜಗದೀಶ್, ಗುರುಕುಲ ನಡೆಸದಿದ್ದರೂ 'ಅಭಾವಿಪ ಕಾರ್ಯಕರ್ತರೆಲ್ಲರಿಗೂ ಕುಲಪತಿ' ಎಂದು ಹಿರಿಯ ಪತ್ರಕರ್ತ ಸಚ್ಚಿದಾನಂದ ಹೆಗಡೆ, 'ಸಂಘದ ಹಣವನ್ನು ಸ್ವಂತಕ್ಕೆ ಬಳಸಬಾರದು' ಎಂದು ಸಂದೇಶ ನೀಡಿದ ಬಗ್ಗೆ ಶ್ರೀ ಎಂ. ಎಚ್. ಶ್ರೀಧರ್, 'ಕುಲಾಧಿಪತಿಗಳ ವಿರುದ್ಧವೇ ಗುಡುಗಿದ ಶಿಕ್ಷಕ, ರಾಜಕಾರಣಿ' ಎಂದು ಪ್ರೊ. ಕೆ. ಜಿ. ಲೋಕೇಶ್ ಕೃಷ್ಣ ಭಟ್ಟರ ವ್ಯಕ್ತಿತ್ವದ ಹಲವು ಮಗ್ಗುಲುಗಳನ್ನು ಪರಿಚಯಿಸಿದ್ದಾರೆ.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಲೇಖನವೂ ಈ ಸಂಗ್ರಹದಲ್ಲಿದ್ದು ಅವರು ಭಟ್ಟರನ್ನು 'ವಿಶಿಷ್ಟಗುಣಗಳ ಗಣಿ' ಎಂದು ಬಣ್ಣಿಸಿ ತಮ್ಮ ಜೀವನದ ತತ್ವಾದರ್ಶಗಳನ್ನು ತಮ್ಮ ಕುಟುಂಬದಲ್ಲಿಯೂ ಬಿತ್ತಿದರು, ಅವರು ಸೂರ್ಯನಂತೆ ಪರಿಷತ್ತಿನ ಚಟುವಟಿಕೆಗಳ ಕೇಂದ್ರಸ್ಥಾನದಲ್ಲಿದ್ದರು ಎಂದೂ ಭಟ್ಟರೊಡನೆ ತಮ್ಮ ದೀರ್ಘ ಒಡನಾಟದ ವಿವರಗಳನ್ನು ಹಂಚಿಕೊಂಡಿದ್ದಾರೆ.

ಬಿ. ಎಸ್. ಯಡಿಯೂರಪ್ಪ, ಕೆ. ಎಸ್. ಈಶ್ವರಪ್ಪ, ಅರವಿಂದ ಲಿಂಬಾವಳಿ, ಪಿ. ಜಿ. ಆರ್. ಸಿಂಧ್ಯಾ, ಮನೋಹರ ಮಸ್ಕಿ, ವಿಶ್ವೇಶ್ವರ ಹೆಗಡೆ ಕಾಗೇರಿ ಮುತಾದ ರಾಜಕಾರಣಿಗಳು, ಸಂಘದ ಹಿರಿಯ ಕಾರ್ಯಕರ್ತರು, ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರು, ಪ್ರೊ. ಎಸ್. ಆರ್. ಲೀಲಾ, ಮುಂತಾದ ಶಿಕ್ಷಣ ತಜ್ಞರು, ಅನಂತ ಹೆಗಡೆ ಅಶೀಸರ ಮುಂತಾದ ಪರಿಸರ ತಜ್ಞರು, ವಕೀಲರು, ಗೃಹಿಣಿಯರು, ಶಿಕ್ಷಕರು, ಉಪನ್ಯಾಸಕರು, ಕುಲಪತಿಗಳು, ಪತ್ರಕರ್ತರು, ವೈದ್ಯರು – ಹೀಗೆ ಸಮಾಜದ ಎಲ್ಲ ವರ್ಗಗಳ ಜನರು ಬರೆದ ಲೇಖನಗಳು ಇಲ್ಲಿವೆ, ಇವೆಲ್ಲವೂ ಭಟ್ಟರ ಸರ್ವಸ್ಪರ್ಶಿ ಗುಣವನ್ನು ಬಿಂಬಿಸುತ್ತವೆ ಎಂದರೆ ಅತಿಶಯೋಕ್ತಿಯಲ್ಲ.

ಭಟ್ಟರು ಬೆಂಗಳೂರಿನಲ್ಲಿ ಕಳೆದ ವಿದ್ಯಾರ್ಥಿ ಜೀವನದ ವಿವರಗಳನ್ನು ಪ್ರಸಿದ್ಧ ಕಾದಂಬರಿಕಾರ, ಬಾಬು ಕೃಷ್ಣಮೂರ್ತಿಯವರು ಸಾರವತ್ತಾಗಿ ಹಂಚಿಕೊಂಡಿದ್ದಾರೆ. ಗುಡ್ಡು ಇನಾಂದಾರ್ ಕೂಡ ಭಟ್ಟರ ಜೊತೆ ತಮ್ಮ ಒಡನಾಟವನ್ನು ದಾಖಲಿಸಿದ್ದಾರೆ.

ಶಿವರಾಮ ಕಾರಂತರು ಉಗ್ರರೂಪ ತಾಳಿದಾಗ ಅವರನ್ನು ಭಟ್ಟರು ನಿಭಾಯಿಸಿದ ರೀತಿ, ಕಾರಂತರ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದು, ಭಟ್ಟರ ಪರಿಸರ ಪ್ರೇಮ, ಕೆಎಸ್ಆರ್ಟಿಸಿ ಬಸ್ ಸ್ವಚ್ಛಗೊಳಿಸಿದ್ದು, ಸರಸಂಘ ಚಾಲಕರ ಭಾಷಣವನ್ನು ಅನುವಾದಿಸಿದ ಪ್ರಕರಣ, ಭಟ್ಟರು ಸಂಪಿಗೆ ಮರ ಹತ್ತಲು ಹೋಗಿ ಕಾಲು ಮುರಿದುಕೊಂಡದ್ದು, ಗಂಗಾನದಿಯಲ್ಲಿ ಈಜಲು ಹೋಗಿ ಅಪಾಯಕ್ಕೆ ಸಿಲುಕಿದ್ದು, ಮುಂತಾದ ಹಲವು ಸ್ವಾರಸ್ಯಕರ ಪ್ರಸಂಗಗಳೂ ಇಲ್ಲಿವೆ.

ಗಣೇಶರು ಹೇಳುವಂತೆ, ಭಟ್ಟರು "ಕಣ್ಣು ಕೋರೈಸುವ ವಿದ್ಯುದ್ದೀಪದಂಥ ಬೆಳಕಲ್ಲ, ಗರ್ಭಗೃಹದಲ್ಲಿ ಮಿನುಗುವ ನಂದಾದೀಪದ ಕಾಂತಿ." ಪಥದರ್ಶಿಯ ಪ್ರತಿಯೊಂದು ಲೇಖನವೂ 'ಪ್ರತಿಪರ್ವರಸೋದಯ!' ದಾರಿಗಾಣದ ಸ್ಥಿತಿಯಲ್ಲಿ 'ಕೈಯ ಕಂದೀಲಿನಂತೆ' ಮಾರ್ಗದರ್ಶನ ಮಾಡುವ ಈ ಪುಸ್ತಕದ ಬೆಲೆ ಕೇವಲ ೨೦೦ ರೂಪಾಯಿಗಳು. ಈ ಅನರ್ಘ್ಯ ಪುಸ್ತಕ ಪ್ರತಿಯೊಬ್ಬರ ಸಂಗ್ರಹದಲ್ಲಿಯೂ ಇರಬೇಕು.

**-ಕೆ. ಜನಾರ್ದನ ತುಂಗ**

ಸಸ್ಯಲೋಕ ಪರಿಚಯ ಮಾಲಿಕೆ- 23

# ಪಂಡಿತರ ಸಿದ್ಧೌಷಧ - ಅಳಲೆಕಾಯಿ



**ಯಸ್ಯ ಮಾತಾ ಗೃಹೇ ನಾಸ್ತಿ ತಸ್ಯ ಮಾತಾ ಹರೀತಕೀ |**
**ಕದಾಚಿತ್ ಕುಪ್ಯತೇ ಮಾತಾ ನೋದರಸ್ಥಾ ಹರೀತಕೀ ||**

೧೮ನೇ ಶತಮಾನದ ರಾಜವಲ್ಲಭ ನಿಘಂಟಿನಲ್ಲಿ ಅಳಲೆ ಕಾಯಿಯ ಮಹತ್ವದ ಬಗ್ಗೆ ಪ್ರಸ್ತಾಪಿತವಾಗಿರುವ ಈ ಶ್ಲೋಕದ ಅರ್ಥ, ಯಾರ ಮನೆಯಲ್ಲಿ ತಾಯಿಯಿಲ್ಲವೋ ಅವರಿಗೆ ಹರೀತಕಿಯೇ ತಾಯಿ, ತಾಯಿ ಒಮ್ಮೊಮ್ಮೆಯಾದರೂ ಕೋಪ ಮಾಡಿಕೊಳ್ಳುತ್ತಾಳೆ, ಆದರೆ, ಹೊಟ್ಟೆಯಲ್ಲಿರುವ ಹರೀತಕಿಯು ಎಂದೂ ಕೋಪಗೊಳ್ಳುವುದಿಲ್ಲ.

ಇಷ್ಟು ಮಹಿಮಾನ್ವಿತವಾದ ಔಷಧೀಯ ಗುಣಗಳಿರುವ ಅಳಲೇಕಾಯಿಯನ್ನು 'ಔಷಧಿಗಳ ರಾಜ; ಅಡುಗೆ ಮನೆಯ ವೈದ್ಯ' ಎಂದೂ ಕರೆದರೆ ಅದು ಅತಿಶಯೋಕ್ತಿಯಲ್ಲ. ಅಡುಗೆ ಮನೆಯಲ್ಲಿ ಅಳಲೆಕಾಯಿ ಇದ್ದರೆ ಒಬ್ಬ ವೈದ್ಯನಿದ್ದಂತೆ ಎಂಬ ಅಭಿಪ್ರಾಯವೂ ಇದೆ. ಈ ಎಲ್ಲವೂ, ಅಳಲೆಕಾಯಿಯ ಔಷಧಿ ಗುಣಗಳ ನಿರ್ದಿಷ್ಟತೆ ಹಾಗೂ ವಿಶ್ವಾರ್ಹತೆಯನ್ನು ಖಚಿತಪಡಿಸುತ್ತವೆ. ಆದ್ದರಿಂದ ಎಲ್ಲ ರೀತಿಯ ಔಷಧಿಗಳ ಬಗ್ಗೆ ಅರಿವು ಇರುವವರಿಗೆ 'ಅಳಲೆಕಾಯಿ ಪಂಡಿತ' ಎಂದು ಕರೆಯುವುದು ವಾಡಿಕೆ.



**ಛಾಯಾ ಓಕ್ ಬಾಪಟ್**

ದಕ್ಷಿಣ ಏಷ್ಯಾದಲ್ಲಿ ಹೆಚ್ಚಾಗಿ ಕಂಡು ಬರುವ ಅಳಲೆಕಾಯಿ ಗಿಡದ ವೈಜ್ಞಾನಿಕ ಹೆಸರು, 'ಟರ್ಮಿನಾಲಿಯಾ ಚೆಬುಲ'(Terminalia chebula). ಆಯುರ್ವೇದದಲ್ಲಿ 'ಹರೀತಕಿ' ಎಂದು ಪ್ರಸಿದ್ಧವಾಗಿರುವ ಮಧ್ಯಮ ಗಾತ್ರದ ಈ ಸಸ್ಯ ಭಾರತದೆಲ್ಲೆಡೆಯೂ ಕಾಣಸಿಗುತ್ತದೆ. ನಮ್ಮ ರಾಜ್ಯದ ಪಶ್ಚಿಮ ಘಟ್ಟ ಹಾಗೂ ಮಲೆನಾಡಿನ ಕಾಡುಗಳಲ್ಲಿ ಹೆಚ್ಚಾಗಿ ಕಾಣಿಸುತ್ತವೆ.

**ಸಸ್ಯ ಪರಿಚಯ:** ಅಳಲೆಕಾಯಿಯಲ್ಲಿ ವಿಜಯ, ರೋಹಿಣಿ, ಮೃತ, ಅಭಯ, ಕೇತರೆ, ಜೀವಂತಿ ಹಾಗೂ ಹರಿತರೆ ಎಂಬ ಏಳು ಪ್ರಭೇದಗಳಿವೆ. ಮರಗಳು 25-35 ಅಡಿ ಎತ್ತರವಾಗಿದ್ದು ಅಚ್ಚ ಹಸಿರಿನ ಎಲೆಗಳನ್ನು ಹೊಂದಿರುತ್ತವೆ. ರೆಂಬೆ-ಕೊಂಬೆಗಳೊಂದಿಗೆ ಶೋಭಿಸುವ ಈ ಮರದ ಹಳದಿ ಮಿಶ್ರಿತ ಬಿಳಿಯ ಹೂವುಗಳು ಕ್ರಮೇಣ ಹಸಿರು ಕಾಯಿಗಳಾಗಿ ಮಾರ್ಪಡುತ್ತವೆ. ನಂತರ, ಮಾಗಿದ ಕಾಯಿಗಳು ಕಂದು ಬಣ್ಣಕ್ಕೆ ತಿರುಗುತ್ತವೆ. ಹಾಗೆಯೇ ಅವುಗಳ ಮೇಲ್ಮೈ ಗಟ್ಟಿಯಾಗುತ್ತದೆ. ಇಂತಹ ಕಾಯಿಗಳನ್ನು ಕಿತ್ತು, ಒಣಗಿಸಿ, ಪುಡಿ ಮಾಡಿ, ಹಲವಾರು ಔಷಧಿಗಳಿಗೆ ಬಳಸಲಾಗುತ್ತದೆ. ಒಣಗಿದ ಅಳಲೆಕಾಯಿ ಅಥವಾ ಹಣ್ಣಾದ ಅಳಲೆಕಾಯಿಗಳನ್ನು ಭೂಮಿಯಲ್ಲಿ ನೆಟ್ಟು, ಗಿಡ ಬೆಳೆಸುತ್ತಾರೆ.

**ಔಷಧೀಯ ಉಪಯೋಗಗಳು:** ಆಯುರ್ವೇದದ ಪ್ರಕಾರ, ವಾತ, ಪಿತ್ತ, ಕಫ ರೋಗ ನಿವಾರಣೆಗೆ ಅಳಲೆಕಾಯಿ ಪರಮೌಷಧಿ. ನೆಗಡಿ, ಕೆಮ್ಮು, ಜ್ವರ ಮುಂತಾದ ಸಾಮಾನ್ಯ ಜಡ್ಡುಗಳಿಂದ ಹಿಡಿದು, ಕಾಮಾಲೆ, ಅಸ್ತಮಾ, ಮೂಲವ್ಯಾಧಿ, ಮತ್ತು ಹೃದ್ರೋಗದಂತಹ ಗಂಭೀರ ಬೇನೆಗಳಿಗೆ ಅಳಲೆಕಾಯಿ ಪರಿಣಾಮಕಾರಿ. ದೇಹದ ಮೇಲೆ ಆಗುವ ಗಾಯಗಳಿಗೆ ಅಳಲೆಕಾಯಿ ರಸ ಲೇಪಿಸಿದರೆ ಬೇಗ ಉಪಶಮನವಾಗುತ್ತದೆ. ಬಹುತೇಕ ಚರ್ಮರೋಗ, ಬ್ಯಾಕ್ಟೀರಿಯಾ ಹಾಗೂ ಫಂಗಸ್ ರೋಗಾಣುಗಳ ನಿಯಂತ್ರಣವೂ ಸಾಧ್ಯವಾಗುತ್ತದೆ. ಅಳಲೆಕಾಯಿಯಲ್ಲಿ ಚೆಬುಲ್ಯಾಜಿಕ್ ಆಸಿಡ್, ಚೆಬುಲಿನಿಕ್ ಆಸಿಡ್ ಮತ್ತು ಕಾರಿಲೇಜಿನ್ ಮುಂತಾದ ರಾಸಾಯನಿಕಗಳಿವೆ.

ಮಲಬದ್ಧತೆ ವಾಯುಪ್ರಕೋಪಗಳಿಂದ ಬಳಲುವವರು ಅಳಲೆಕಾಯಿ ಚೂರ್ಣವನ್ನು ಜೇನುತುಪ್ಪದೊಂದಿಗೆ ಸೇವಿಸಿದರೆ ಸಮಸ್ಯೆ ದೂರವಾಗುತ್ತದೆ. ವಿರೇಚಕ ಗುಣವಿರುವುದರಿಂದ ದೇಹದ ಶಕ್ತಿ ವೃದ್ಧಿಯಾಗುತ್ತದೆ, ಯಕೃತ್ ಶುದ್ಧಿಯಾಗುತ್ತದೆ. ಇದರ ಕಷಾಯ ಸೇವಿಸಿದರೆ ರಕ್ತ ಶುದ್ಧಿಯ ಜೊತೆಗೆ ರೋಗನಿರೋಧಕ ಶಕ್ತಿಯೂ ಹೆಚ್ಚುತ್ತದೆ. ಕಷಾಯ ಮುಕ್ಕಳಿಸಿದರೆ ಹಲ್ಲು ನೋವು, ಬಾಯಿ ಹುಣ್ಣು, ಬಾಯಿ ದುರ್ವಾಸನೆ ಇಲ್ಲವಾಗುತ್ತದೆ. ಮಧುಮೇಹಿಗಳಿಗೂ ಅಳಲೆಕಾಯಿಯು ಒಂದು ಸಂಜೀವಿನಿ. ಊಟಕ್ಕೂ ಮೊದಲು ಬೆಳಿಗ್ಗೆ ಹಾಗೂ ಸಂಜೆ ಕಷಾಯ ಸೇವಿಸಿದರೆ ದೇಹದಲ್ಲಿ ಇನ್ಸುಲಿನ್ ಉತ್ಪತ್ತಿಯಾಗುತ್ತದೆ ಎಂದು ಹೇಳುತ್ತಾರೆ. ಕಣ್ಣುಗಳ ಬೇನೆ ನಿವಾರಣೆಗೆ ಸಹಕಾರಿ. ಇದರ ಪುಡಿ ಸೇವನೆಯಿಂದ ದೇಹದ ಉಷ್ಣತೆಯನ್ನು ಸಮತೋಲನದಲ್ಲಿರುತ್ತದೆ; ದೇಹದ ಕೊಬ್ಬು ಕರಗುತ್ತದೆ; ನರದೌರ್ಬಲ್ಯ ನಿವಾರಣೆಯಾಗುತ್ತದೆ.

**ಎಚ್ಚರಿಕೆ:** ಗರ್ಭಿಣಿಯರು ಅಳಲೆಕಾಯಿ ಔಷಧಿಗಳನ್ನು ಸೇವಿಸಬಾರದು. ಆಯುರ್ವೇದ ತಜ್ಞರ ಸಲಹೆ ಇಲ್ಲದೇ ಈ ಸಸ್ಯದ ಔಷಧಿಗಳನ್ನು ಪ್ರಯೋಗಿಸಬಾರದು.

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| **394** 16/07/23 | ಉತ್ತರಹಳ್ಳಿಯ ಸುಬ್ರಹ್ಮಣ್ಯಪುರ ಕೆರೆಯ ಆವರಣ. | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅಮೇರಿಕಾದ ಮೆಲ್ಬನ್ ಫೌಂಡೇಶನ್‌ನ ಡಾ. ಸ್ಟೀಫನ್ ಬೆತ್ಮೆನ್ , ಬಿಎಂಎಸ್ ಕಾಲೇಜು, ಆರ್. ಎಂ. ಎಸ್ ಪಿಯು ಕಾಲೇಜು, ಆರ್. ಎನ್. ಎಸ್. ಐ. ಟಿ ವಿದ್ಯಾರ್ಥಿಗಳು, ಸ್ಥಳೀಯರು ಸೇರಿ 219 ಜನರು. | ಔಷಧಿ , ಹಣ್ಣುಗಳ ಗಿಡಗಳು ಸೇರಿದಂತೆ ನಾನಾ ಜಾತಿಯ ಒಟ್ಟು 75 ಗಿಡಗಳು |
| **395** 23/07/23 | ಬೆಂಗಳೂರಿನ ಗುಬ್ಬಲಾಳದ ಬನಶಂಕರಿ 6ನೇ ಹಂತ, ವೃಷಭಾವತಿ ನಗರ | ಸಿಎಂಆರ್ ಯೂನಿವರ್ಸಿಟಿ, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆರ್. ವಿ. ಕಾಲೇಜು ವಿದ್ಯಾರ್ಥಿಗಳು, ಸ್ಥಳೀಯರು, ಸಂಸ್ಥೆಯ ಕಾರ್ಯಕರ್ತರು. | ನಾನಾ ಜಾತಿಯ 60 ಗಿಡಗಳು |
| **396** 30/07/23 | ಬೆಂಗಳೂರು ವಿಶ್ವವಿದ್ಯಾನಿಲಯದ NGEF ಬಯೋ ಪಾರ್ಕ್ ಆವರಣ | ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಆರ್. ವಿ. ಕಾಲೇಜು ವಿದ್ಯಾರ್ಥಿಗಳು, ಸ್ಥಳೀಯರು, ಸಂಸ್ಥೆಯ ಕಾರ್ಯಕರ್ತರು. | ಔಷಧಿ , ಹಣ್ಣುಗಳ ಗಿಡಗಳು ಸೇರಿದಂತೆ ನಾನಾ ಜಾತಿಯ ಒಟ್ಟು 75 ಗಿಡಗಳು |
| **397** 06/08/23 | ಕೋಲಾರ ಜಿಲ್ಲೆಯ ಪ್ರಸಿದ್ಧಿ ತಾಣ "ಅಂತರಗಂಗೆ"ಯಲ್ಲಿ | ಅದಮ್ಯ ಚೇತನ, ವಾಸವಿ ಸೇವಾ ಸಮಿತಿ ಸಂಸ್ಥೆ ಹಾಗೂ ಸಮಾನ ಮನಸ್ಕ ಗೆಳೆಯರ ಬಳಗದ ಸಹಯೋಗದ ಈ ಕಾರ್ಯಕ್ರಮದಲ್ಲಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸಮಿತಿಯ ಮುಖ್ಯಸ್ಥ ಶ್ರೀ ಲಯನ್ ಶಿವಶೇಖರ್ ಮತ್ತಿತರರು. | ನಾನಾ ಜಾತಿಯ ಹಣ್ಣುಗಳ ಸುಮಾರು 60ಕ್ಕೂ ಅಧಿಕ ಗಿಡಗಳು. |
| **398** 13/08/23 | ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು | ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಅದಮ್ಯ ಚೇತನದ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಕಿರಿಯ ಸ್ವಾಮೀಜಿಗಳಾದ ಶ್ರೀ ರಮಣಾನಂದನಾಥ ಸ್ವಾಮೀಜಿ, ಜಪಾನಿನ ಟೊರು ಹೊಮ್ಮ, ಪುತ್ರ, ಕೈಟಾ ಹೊಮ್ಮ, ಸಂಸ್ಥೆಯ ಸ್ವಯಂ ಸೇವಾ ಕಾರ್ಯಕರ್ತರು. | 50 ನಾನಾ ಜಾತಿಯ ಹಣ್ಣಿನ ಗಿಡಗಳು |

ವ್ಯಕ್ತಿ ವಿಶೇಷ ಮಾಲಿಕೆ

# 'ವನಸುಮ'ದಂತೆ ಬದುಕಿದ ಮದನ್ ದಾಸ್ ದೇವಿ

"ತಮ್ಮ ಸೈದ್ಧಾಂತಿಕ ಸ್ಪಷ್ಟತೆಯ ಕಾರಣದಿಂದಾಗಿ ಅವರು ಯಾವುದೇ ಸಂದರ್ಭದಲ್ಲಿಯೂ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಅವರ ಮಾತುಗಳು, ಕಾರ್ಯಶೈಲಿ ಮತ್ತು ಸೈದ್ಧಾಂತಿಕ ಸ್ಪಷ್ಟತೆಗಳು ನಮಗೆ ಪ್ರೇರಣೆಯನ್ನು ನೀಡುತ್ತವೆ. ಅವರ ಜೀವನ ಪಾರದರ್ಶಕವಾಗಿತ್ತು; ಅವರು ಸದಾ ಕಾರ್ಯತತ್ಪರರು. ಅವರು ಮೃದು ಅಂತಃಕರಣ ಹೊಂದಿದ್ದರು. ಜನರನ್ನು ಅರ್ಥಮಾಡಿಕೊಳ್ಳುವ ಅದ್ಭುತ ಸಾಮರ್ಥ್ಯ ಅವರಲ್ಲಿತ್ತು. ಅವರು ತಮ್ಮ ಜೀವನದಲ್ಲಿ ಯಾರನ್ನೂ ನಿರ್ಲಕ್ಷಿಸಲಿಲ್ಲ."

ಇತ್ತೀಚೆಗೆ ನಿಧನರಾದ ಶ್ರೀ ಮದನ್‌ದಾಸ್‌ದೇವಿಯವರ ಕುರಿತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕೇಂದ್ರ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಶ್ರೀ ಭೈಯಾಜಿ ಜೋಶಿಯವರು ಹೇಳಿದ ಈ ಮಾತುಗಳು ಶ್ರೀ ದೇವಿಯವರ ಸಮಗ್ರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ಒಂದು ಸಂಘಟನೆಯ ಮುಖವಾಣಿಯಾಗಿ ಮುಂಚೂಣಿಯಲ್ಲಿ ಅನೇಕರು ಕಾಣಿಸುತ್ತಾರೆ. ಆದರೆ ಅವರೆಲ್ಲರ ಹಿಂದೆ ಒಂದು ವಿಸ್ತೃತ ಜಾಲವನ್ನು ಹೆಣೆದು ದೃಢವಾದ ಭೂಮಿಕೆಯನ್ನು ಸಿದ್ಧಪಡಿಸಲು ಸದಾ ಕೆಲಸ ಮಾಡಿದ ಅನೇಕರು ತೆರೆಮರೆಯಲ್ಲಿಯೇ ಉಳಿದುಬಿಡುತ್ತಾರೆ. ಅಂತೆಯೇ ದೇಶದ ಬೃಹತ್ ವಿದ್ಯಾರ್ಥಿ ಸಂಘಟನೆಯಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿಗಾಗಿ ಜೀವನವನ್ನೇ ಮುಡಿಪಾಗಿಟ್ಟ ಶ್ರೀ ಮದನ್‌ದಾಸ್ ದೇವಿಯವರು ತೆರೆಯ ಮರೆಯಲ್ಲಿಯೇ ಉಳಿದುಬಿಟ್ಟರು.

ಪುಣೆಯ ಪ್ರತಿಷ್ಠಿತ ಕಾಲೇಜಿನಿಂದ ಎಂಕಾಂ, ಐಎಲ್‌ಎಸ್ ಕಾನೂನು ಕಾಲೇಜಿನಿಂದ ಎಲ್‌ಎಲ್‌ಬಿ, ಸನ್ನದು ಲೆಕ್ಕಿಗರ (Chartered Accountant) ಪರೀಕ್ಷೆಯಲ್ಲಿ ಚಿನ್ನದ ಪದಕ - ಇಷ್ಟೆಲ್ಲ ಶೈಕ್ಷಣಿಕ ಸಾಧನೆ ಮಾಡಿದವರು ವಕೀಲರಾಗಿಯೋ, ಲೆಕ್ಕ ಪರಿಶೋಧಕರಾಗಿಯೋ ಸಂಪತ್ತಿನ ರಾಶಿಯ ಮೇಲೆ ಕುಳಿತುಕೊಳ್ಳಬಹುದಿತ್ತು; ಅದರೆ ಮದನ್‌ದಾಸ್ ದೇವಿ ಯವರು ಆರಿಸಿಕೊಂಡದ್ದು ಸಾಮಾಜಿಕ ಕಾರ್ಯ!

೧೯೬೮ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪಶ್ಚಿಮ ವಲಯದ ಪೂರ್ಣಕಾಲಿಕ ಸಂಘಟನಾ ಕಾರ್ಯದರ್ಶಿಯಾಗುವ ಮೊದಲು ಮದನ್‌ಜೀ ೧೯೬೬ರಲ್ಲಿಯೇ ಮುಂಬಯಿ ನಗರದಲ್ಲಿ ಪರಿಷತ್ತಿನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು. ಸಂಘದಿಂದ ಅಭಾವಿಪಕ್ಕೆ ನಿಯೋಜಿತರಾದ ಪ್ರಥಮ ಪ್ರಚಾರಕ ಎಂಬ ಹೆಗ್ಗಳಿಕೆ, ಅವರದ್ದು. ಆರೆಸ್ಸೆಸ್ ಕಾರ್ಯಕರ್ತರಾಗಿದ್ದ ಅಣ್ಣ, ಕುಶಲ್‌ದಾಸ್ ದೇವಿ ಯವರ ಪ್ರೇರಣೆಯಿಂದ ಬಾಲ್ಯದಲ್ಲಿಯೇ ಆರೆಸ್ಸೆಸ್ ಪ್ರವೇಶ ಮಾಡಿದ ಮದನ್‌ದಾಸ್ ದೇವಿಯವರು ೧೯೬೪ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾದರು. ಮಹಾರಾಷ್ಟ್ರದಲ್ಲಿ ಪರಿಷತ್ತನ್ನು ಒಂದು ಶಕ್ತಿಯಾಗಿ ಬೆಳೆಸಿದ ನಂತರ ಅವರು ೧೯೭೦ ರಿಂದ ೧೯೯೨ರ ವರೆಗೆ ಪರಿಷತ್ತಿನ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದರು. ೧೯೯೩ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ-ಸರಕಾರ್ಯವಾಹ ಆಗಿ ಜವಾಬ್ದಾರಿಯನ್ನು ನಿಭಾಯಿಸಿದರು. ಮುಂದೆ, ೨೦೦೯ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿಣಿಯ ಸದಸ್ಯರಾದರು.

ಆದರೆ, ಮಾನವ ಸಂಬಂಧಗಳನ್ನು ನಿಭಾಯಿಸುವ ಅವರ ಕೌಶಲ್ಯವನ್ನು ಸಂಪೂರ್ಣವಾಗಿ ಒರೆಹಚ್ಚಿದ್ದು ೧೯೯೯ ರಿಂದ ೨೦೦೪ರ ನಡುವಣ ಅವಧಿಯಲ್ಲಿ. ದೇಶದಲ್ಲಿ ಮೊತ್ತಮೊದಲ ಬಾರಿಗೆ ಭಾರತೀಯ ಜನತಾ ಪಕ್ಷ ಅಧಿಕಾರದ ಗದ್ದುಗೆ ಹಿಡಿದು ಅಟಲ್‌ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಸರಕಾರವನ್ನು ರಚಿಸಿದ ಈ ಅವಧಿಯಲ್ಲಿ ಸರಕಾರ ಮತ್ತು ಆರೆಸ್ಸೆಸ್ ನಡುವಣ ಸಂಪರ್ಕಸೇತುವಿನಂತೆ ಅವರು ಕೆಲಸ ಮಾಡಿದರು. ಈ ಮೊದಲು, ರಾಮ ಮಂದಿರದ ಚಳವಳಿ ಕಾವು ಪಡೆದುಕೊಂಡಿದ್ದ ಸಮಯದಲ್ಲಿ ಭಾರತೀಯ ಜನತಾ ಪಕ್ಷ ಮತ್ತು ಸಂಘದ ನಡುವೆ ಸಮನ್ವಯಕಾರರಾಗಿ ದುಡಿದ ಅನುಭವವು ಪಕ್ಷದ ಸರಕಾರ ರಚನೆಯಾದ ಸಂದರ್ಭದಲ್ಲಿ ಅವರ ನೆರವಿಗೆ ಬಂದಿತು.

೧೯೯೦ರ ಸುಮಾರಿಗೆ ದೇಶವು ಆರ್ಥಿಕ ಸಂಕಷ್ಟವನ್ನೆದುರಿಸಿದಾಗ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಸವಾಲುಗಳು ದೇಶವನ್ನು ಕಾಡತೊಡಗಿದವು. ಆಗ ಮದನ್‌ಜೀಯವರೊಳಗಿನ ಪ್ರಖರ ರಾಷ್ಟ್ರವಾದವು ಜಾಗೃತವಾಯಿತು. ಆಗ ಹೆಚ್ಚೂ ಕಡಿಮೆ ಮರೆತೇ ಹೋಗಿದ್ದ ಸ್ವದೇಶೀ ಚಳವಳಿಯನ್ನು ಮತ್ತೆ ಮುನ್ನೆಲೆಗೆ ತಂದರು. 'ಆರ್ಥಿಕ ರಾಷ್ಟ್ರವಾದ'ಎಂಬ ಪರಿಕಲ್ಪನೆಯನ್ನು ನಿರೂಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೂಲಕ ಪ್ರಚಾರಕ್ಕೆ ತಂದರು. (ಇಂದು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಪ್ರತಿಪಾದಿಸುತ್ತಿರುವ ಆರ್ಥಿಕ ಸ್ವಾವಲಂಬನೆ ನೀತಿಯ ಹಿಂದೆ ಮದನ್‌ಜೀಯವರ ಆರ್ಥಿಕ ರಾಷ್ಟ್ರವಾದದ ಪ್ರಭಾವವಿದೆ) ದೇಶವು ದಿವಾಳಿ ಸ್ಥಿತಿಯನ್ನು ತಲುಪಿದಾಗ ದೇಶದ ಚಿನ್ನವನ್ನು ಅಡವಿಡಲಾಗಿತ್ತು. ವಿತ್ತ-



ಸಂಸ್ಥೆಗಳ ಒತ್ತಡದಿಂದ ದೇಶದ ಆರ್ಥಿಕ ಸ್ವಾವಲಂಬನೆಗೆ ಕುತ್ತು ಬಂದಿತ್ತು. ಮುಂದುವರಿದ ದೇಶಗಳು ಭಾರತವನ್ನು ಕೇವಲ ಕೂಲಿಗಳ ಮಾರುಕಟ್ಟೆ ಎಂದು ಪರಿಗಣಿಸುವ ಸ್ಥಿತಿ ಎದುರಾಗಿತ್ತು. ಇಂತಹ ಸಂದರ್ಭದಲ್ಲಿ ಮದನ್‌ಜೀ, ಶ್ರೀ ದತ್ತೋಪಂತ್ ಠೇಂಗಡಿ, ಶ್ರೀ ಎಂ ಜಿ ಬೊಕಾರೆ ಮತ್ತಿತರರು ಜೊತೆ ಸೇರಿ ಸ್ವದೇಶೀ ಜಾಗರಣ ಮಂಚ್ ಸ್ಥಾಪನೆ ಮಾಡಿದರು. ಆ ಸಂಸ್ಥೆಯ ರಾಷ್ಟ್ರೀಯ ಸಹ ಸಂಯೋಜಕರಾಗಿ ಜಾಗತೀಕರಣದ ವಿರುದ್ಧ ಜನಾಭಿಪ್ರಾಯ ರೂಪಿಸಿದರು. ಬಿಜೆಪಿ ಅಧಿಕಾರಕ್ಕೆ ಬಂದಾಗಲೂ ಸ್ವದೇಶೀ ಜಾಗರಣ ಮಂಚ್ ಅನೇಕ ಆರ್ಥಿಕ ವಿಷಯಗಳ ಬಗ್ಗೆ ತನ್ನ ಸ್ಪಷ್ಟ ನಿಲುವನ್ನು ಸರಕಾರದ ಗಮನಕ್ಕೆ ತರುತ್ತಿತ್ತು. ಮದನ್‌ಜೀಯವರ ಮಾರ್ಗದರ್ಶನದಲ್ಲಿ ಸ್ವದೇಶೀ ಜಾಗರಣ ಮಂಚ್, ವಿಶ್ವ ವ್ಯಾಪಾರ ಸಂಸ್ಥೆ(WTO)ಯ ಪ್ರಾರಂಭಕ್ಕೆ ಮುನ್ನ ತಯಾರಿಸಿದ ಡಂಕೆಲ್ ಕರಡು ಪ್ರಸ್ತಾಪಗಳ ವಿರೋಧದಿಂದ ಹಿಡಿದು ಬೌದ್ಧಿಕ ಆಸ್ತಿ ಹಕ್ಕುಗಳ, ಕಾರ್ಮಿಕ ಮಾನಕಗಳ (Labour Standards) ವರೆಗೆ ಅನೇಕ ವಿಷಯಗಳಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ಉಂಟಾಗುತ್ತಿದ್ದ ಅನ್ಯಾಯವನ್ನು ಶತಾಯಗತಾಯ ವಿರೋಧಿಸಿತು. ಮಹಾರಾಷ್ಟ್ರದಲ್ಲಿ ಎನ್ರಾನ್ ಸಂಸ್ಥೆಯ ವಿರುದ್ಧ ಮತ್ತು ಅನೇಕ ಜಾಗತಿಕ ಸಂಸ್ಥೆಗಳಿಗೆ ಇಂಧನ ಕ್ಷೇತ್ರದಲ್ಲಿ ಅವಕಾಶ ನೀಡುವುದನ್ನು ವಿರೋಧಿಸಿ ಜನಾಭಿಪ್ರಾಯ ರೂಪಿಸುವಲ್ಲಿ ಮದನ್‌ಜೀಯವರ ಪಾತ್ರ ಅನುಪಮವಾದದ್ದು. ವಿಮಾ ಕ್ಷೇತ್ರದಲ್ಲಿ ವಿದೇಶೀ ನೇರ ಬಂಡವಾಳ ಹಾಗೂ ಸರಕಾರದ ಬಂಡವಾಳ ಹಿಂತೆಗೆತ ನೀತಿಗಳಂತಹ ವಿಷಯಗಳಲ್ಲಿಯೂ ಸ್ವದೇಶೀ ಜಾಗರಣ ಮಂಚ್ ಸರಕಾರದ ಜೊತೆ ತೀವ್ರ ಭಿನ್ನಾಭಿಪ್ರಾಯ ತಳೆದಿತ್ತು. ಈ ಹಿನ್ನೆಲೆಯಲ್ಲಿ ೨೦೦೩ರಲ್ಲಿ ನಡೆದ 'ಮಹಾ ಧರಣಿ' ಕಾರ್ಯಕ್ರಮವು ಜಗತ್ತಿನ ಎಲ್ಲ ಬಡ ಹಾಗೂ ಅಭಿವೃದ್ಧಿಶೀಲ ದೇಶಗಳ ಪ್ರಶಂಸೆಗೆ ಪಾತ್ರವಾಗಿತ್ತು.

ಮಹಾರಾಷ್ಟ್ರದ ಸೋಲಾಪುರದ ಹತ್ತಿರದ ಕಲಮಲ ಎಂಬ ಪುಟ್ಟ ಹಳ್ಳಿಯಲ್ಲಿ ಜುಲೈ ೯, ೧೯೪೦ರಂದು ಜನಿಸಿದ ಮದನ್‌ದಾಸ್ ದೇವಿ, ಡಿವಿಜಿಯವರು ಹೇಳುವ 'ವನಸುಮ'ದಂತೆ ಬದುಕಿ ಜುಲೈ ೨೪, ೨೦೨೩ರಂದು ಬೆಂಗಳೂರಿನ ರಾಷ್ಟ್ರೋತ್ಥಾನ ಪರಿಷತ್ ಆಸ್ಪತ್ರೆಯಲ್ಲಿ ಅಸ್ತಂಗತರಾದರು. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸರಸಂಘ ಚಾಲಕ ಮೋಹನ್ ಭಾಗವತ್ ಮುಂತಾದ ಗಣ್ಯರು, ಸಾವಿರಾರು ಕಾರ್ಯಕರ್ತರು, ಮದನ್‌ಜೀಯವರ ರಾಷ್ಟ್ರಸಮರ್ಪಿತ ಜೀವನವನ್ನು ಸ್ಮರಿಸಿಕೊಂಡಿದ್ದಾರೆ.

ಸರಸಂಘ ಚಾಲಕರಾದ ಡಾ. ಮೋಹನ್ ಭಾಗವತ್ ರವರು ವರ್ಣಿಸಿದಂತೆ, "ಮದನ್‌ದಾಸ್ ದೇವಿಯವರು ವ್ಯಕ್ತಿಗಳ ಹೃದಯವನ್ನು ಗೆಲ್ಲುತ್ತಿದ್ದರು. ಬದುಕಿಗೆ ಸರಿಯಾದ ದಾರಿಯನ್ನು ತೋರಿಸುವ ಪಿತೃವಾತ್ಸಲ್ಯ ಅವರದು. ಸಂಘಟನೆಯ ಕೆಲಸ ಮಾಡುವಾಗ ಮತ್ತು ವ್ಯಕ್ತಿಗಳನ್ನು ಒಂದುಗೂಡಿಸುವಾಗ ತುಂಬ ಸಮಸ್ಯೆ ಎದುರಿಸಬೇಕಾಗುತ್ತದೆ. ಇದು ಹೇಳುವಷ್ಟು ಸುಲಭವಲ್ಲ. ಅಂತಹ ಸಂದರ್ಭಗಳಲ್ಲಿ ಅವರು ಸ್ಥಿತಪ್ರಜ್ಞರಂತೆ ಸವಾಲುಗಳನ್ನು ಎದುರಿಸಿದರು. ನಮ್ಮನ್ನು ಶಾಶ್ವತವಾಗಿ ಅಗಲುವ ಸಂದರ್ಭದಲ್ಲಿಯೂ ಅವರ ಶಾಂತ ಮುಖಮುದ್ರೆ ಅವರು ಬದುಕಿದ ರೀತಿಗೆ ನಿದರ್ಶನ.

ಮದನ್ ದಾಸ್‌ದೇವಿಯವರು ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬ ವ್ಯಕ್ತಿಗೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಕಾರ್ಯದಲ್ಲಿ ನಿರತರಾಗುವಂತೆ ಪ್ರೇರಣೆ ನೀಡಿದರು. ಅವರ ವಿಚಾರಧಾರೆ ಮತ್ತು ಮೃದು ಅಂತಃಕರಣಗಳಿಗೆ ಮನಸೋಲದವರಿಲ್ಲ. ಅವರ ಬೋಧನೆಗಳನ್ನು ಪಾಲಿಸುವುದು ಮತ್ತು ನಮ್ಮ ಸಾಮಾಜಿಕ ಕಾರ್ಯಗಳನ್ನು ವಿಸ್ತರಿಸುವುದು, ನಾವು ಅವರಿಗೆ ಸಲ್ಲಿಸಬಹುದಾದ ಶ್ರದ್ಧಾಂಜಲಿ. "

**-ಕೆ. ಜನಾರ್ದನ ತುಂಗ**

# ಅದಮ್ಯಚೇತನ ತಿಂಗಳ ವರದಿ (15 ಜುಲೈ 2023 ರಿಂದ 15 ಆಗಸ್ಟ್ 2023)



**ಗಣ್ಯರ ಭೇಟಿ:** ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟರ ಅವರ ಬಗ್ಗೆ ಆತ್ಮೀಯರು ಬರೆದ ಲೇಖನಗಳ ಸಂಗ್ರಹ 'ಪಥದರ್ಶಿ' ಕೃತಿಯ ಲೋಕಾರ್ಪಣೆ ಸಮಾರಂಭಕ್ಕೆ ಆಗಮಿಸಿದ್ದ ಪ್ರೊ. ಶಾಂತಿಶ್ರೀ ಪಂಡಿತ್, ಪ್ರೊ. ರಾಜಕುಮಾರ್ ಭಾಟಿಯಾ, ಪ್ರೊ. ಎ.ಡಿ.ಎನ್. ಬಾಜಪೇಯಿ, ಪ್ರೊ. ಪ್ರಕಾಶ್ ಮಣಿ ತ್ರಿಪಾಠಿ, ಪ್ರೊ. ಸುಷ್ಮಾ ಯಾದವ್, ಪ್ರೊ. ಚಂದ್ರಕಲಾ ಪಂಡಿತ್, ಪ್ರೊ. ಶೈಲಾ ರಾಯ್, ಪ್ರೊ. ರಮೇಶ್ ಸಾಲಿಯಾನ್, ಪ್ರೊ. ಅಮರಜೀವ ಲೋಚನ, ಡಾ. ಸಂಜಯ್ ಸತ್ಯಾರ್ಥಿ, ಪ್ರೊ. ಸುಧೀರ್ ಬಾಬು, ಪ್ರೊ. ಕೆ.ಬಿ. ರಂಗಪ್ಪ, ಡಾ. ಪ್ರೀತಿ ಶರ್ಮ, ಪ್ರೊ. ಗೋವಿಂದ ಶರ್ಮ, ಡಾ. ಪೂರ್ವಾ ಭಟ್, ಡಾ. ಪ್ರವೇಶ್ ಕುಮಾರಿ, ಡಾ. ಸತೀಶ್ ಅಗರವಾಲ್, ಡಾ. ಗಿರೀಶ್ ಗೌರವ್, ಡಾ. ಸಂಜಯ್ ಯಾದವ್, ಡಾ. ಆಕಾಶ ಸೋನಿ, ಡಾ. ಸರಿಕಾ ಸಿಂಗ್ ಮುಂತಾದ ಗಣ್ಯರು ಗವಿಪುರದ ಅದಮ್ಯ ಚೇತನ ಸಂಸ್ಥೆಯ ಅನ್ನಪೂರ್ಣ ಅಡುಗೆಮನೆಗೆ ೦೫/೦೮/೨೦೨೩ರಂದು ಭೇಟಿ ನೀಡಿದರು.

ಭಾರತದ ಲಘು ಯುದ್ಧ ವಿಮಾನ ಯೋಜನೆಯ ನಿವೃತ್ತ ನಿರ್ದೇಶಕ, ಪದ್ಮಶ್ರೀ ಡಾ. ಕೋಟಾ ಹರಿನಾರಾಯಣ, ಕಾರ್ಯಕ್ರಮ ನಿರ್ದೇಶಕ ಜಿತೇಂದ್ರ ಜಾಧವ್, ಯೋಜನಾ ನಿರ್ದೇಶಕ ಶಂಕರಯ್ಯ ಮಾಡ, AREWA ಅಧ್ಯಕ್ಷ ಬಿಜು ಉತಪ್, ಉಪಾಧ್ಯಕ್ಷ ಡಾ. ಡಿ. ಸೀತಾರಾಮ ರಾಜು, ಉಪಾಧ್ಯಕ್ಷ ಕೆ. ನಾಗರಾಜು ಮೊದಲಾದವರು 'ಅನ್ನಪೂರ್ಣ' ಅಡುಗೆ ಮನೆಗೆ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಎಬಿವಿಪಿ ಸಂಘಟನೆಯಲ್ಲಿ ಅನಂತಕುಮಾರರ ಒಡನಾಡಿಯಾಗಿದ್ದ ವಿನಯ ದಾಸ್ (ಪಶ್ಚಿಮ ಬಂಗಾಳದ ಕೂಚ್‌ಬಿಹಾರ್) ಮತ್ತು ಅನಂತಕುಮಾರರ ಹಿತೈಷಿ, ಮಂಗಳಾ ಗುರುನಾಥ ಮತ್ತು ಶಾರದಾ (ಬೆಂಗಳೂರು) - ಇವರೂ ಅದಮ್ಯ ಚೇತನ ಮತ್ತು ಅನಂತ ಪ್ರೇರಣಾ ಕೇಂದ್ರಗಳಿಗೆ ಭೇಟಿ ನೀಡಿದ್ದರು.

**ಎ - ಚಾಟ್ ಕಾರ್ಯಕ್ರಮ:** ಜುಲೈ ತಿಂಗಳ ಕಾರ್ಯಕ್ರಮವು ಎಂದಿನಂತೆ ಕೊನೆಯ ಶನಿವಾರ, ೨೯/೦೭/೨೦೨೩ರಂದು ಅದಮ್ಯ ಚೇತನದ ಸಭಾಭವನದಲ್ಲಿ ನಡೆಯಿತು. ಯೋಗತಜ್ಞ, ಡಾ. ಎಸ್. ರಾಘವೇಂದ್ರ ಪ್ರಸಾದ್ ಸರಳ ಮುದ್ರೆಗಳ ಮೂಲಕ ಮನೋದೈಹಿಕ ಸಮತೋಲನವನ್ನು ಕಾಯ್ದುಕೊಳ್ಳುವ ಬಗೆಯನ್ನು ವಿವರಿಸಿದರು. ಶ್ರೀ ನರಸಿಂಹ ಕುಲಕರ್ಣಿಯವರ ಹಾರ್ಮೋನಿಯಂ ಹಾಗೂ ಶ್ರೀ ವಾದಿರಾಜ್ ದಂಡಾಪುರ ಅವರ ತಬಲಾ ಸಹಯೋಗದಲ್ಲಿ ಕು. ರಾಗಿಣಿ ಕುಲಕರ್ಣಿಯ ಸುಗಮ ಸಂಗೀತ ಪ್ರೇಕ್ಷಕರ ಮನರಂಜಿಸಿತು. ಕು. ಗೌರಿ ಎನ್. ಪ್ರಸಾದ್ ಹಾಗೂ ಪ್ರಜ್ಞಾ ಎನ್. ಪ್ರಸಾದ್ ಅವರು 'ಸಂಕ್ಷಿಪ್ತ ರಾಮಾಯಣ' ಕುರಿತು ಹರಿಕಥೆ ನಡೆಸಿಕೊಟ್ಟರು.

ಶ್ರೀ ಎಂ. ಬಸವರಾಜ್ ಅವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಕುಮಾರಸ್ವಾಮಿಯವರು ಕಾರ್ಯಕ್ರಮ ನಿರೂಪಣೆ ಮಾಡಿದರು.

**ಚಿಣ್ಣರ ಚೇತನ ಗೋಡೆ ಪತ್ರಿಕೆ ಬಿಡುಗಡೆ:** 'ಚಿಣ್ಣರ ಚೇತನ' ಗೋಡೆಪತ್ರಿಕೆಯ ಅಗಸ್ಟ್‌ತಿಂಗಳ ಸಂಚಿಕೆಯನ್ನು ಎಚ್. ಎಸ್. ಆರ್. ಲೇಔಟ್‌ನಲ್ಲಿರುವ ಆಕ್ಸ್‌ಫರ್ಡ್ ಕಾಲೇಜಿನಲ್ಲಿ ಎನ್.ಡಿ.ಆರ್ ಐ ಮಾಜಿ ನಿರ್ದೇಶಕ ಕೆ.ಪಿ. ರಮೇಶ್, ಬಿಬಿಎಂಪಿ ಕಾರ್ಪೋರೇಟರ್ ಶ್ರೀ ಗುರುಮೂರ್ತಿ ರೆಡ್ಡಿ, ಆಕ್ಸ್‌ಫರ್ಡ್ ಕಾನೂನು ಕಾಲೇಜು ಪ್ರಾಚಾರ್ಯ ಡಾ. ಪ್ರಜ್ಞಾ ಪಾಟೀಲ್, ವಿಜ್ಞಾನ ಕಾಲೇಜು ಪ್ರಾಚಾರ್ಯ ಡಾ. ಕಾವ್ಯಶ್ರೀ, ವ್ಯವಹಾರ ನಿರ್ವಹಣಾ ಕಾಲೇಜಿನ ಪ್ರಾಚಾರ್ಯ ಡಾ. ನಿಕಿತಾ ಆಲೂರು, ಕಲಾ ಕಾಲೇಜಿನ ಪ್ರಾಚಾರ್ಯ ಶ್ರೀಮತಿ ಗಾಯತ್ರಿ, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಜೆಪಿ ಮಹಿಳಾ ಮೋರ್ಚಾ (ಬೆಂಗಳೂರು ದಕ್ಷಿಣ) ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಮತ್ತಿತರ ಗಣ್ಯರ ಸಮಕ್ಷದಲ್ಲಿ ಬಿಡುಗಡೆ ಮಾಡಲಾಯಿತು.

**ಇತರ ಕಾರ್ಯಕ್ರಮಗಳು:** ಅದಮ್ಯ ಚೇತನದ ಕಚೇರಿಯಲ್ಲಿ ಶ್ರೀಚೇತನ ಸಭೆ, ಹಸಿರು ಭಾನುವಾರ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಪ್ಲೇಟ್‌ಬ್ಯಾಂಕ್, ಪ್ರತಿ ಗುರುವಾರ ನಡೆಯುವ ಭಗವದ್ಗೀತೆ ಪಠಣ ಮುಂತಾದ ಕಾರ್ಯಕ್ರಮಗಳು ನಿರಂತರವಾಗಿ ನಡೆದುಕೊಂಡು ಬಂದಿವೆ.

**ಕಾರ್ಯಕರ್ತರ ಸಭೆ:** ಅನಂತಕುಮಾರ್ ಪ್ರತಿಷ್ಠಾನದ ಕಾರ್ಯಕರ್ತರ ಸಭೆಯು ೧೨/೦೮/೨೦೨೩ ರಂದು ಜಯನಗರದ ವಿಜಯ ವಿದ್ಯಾ ಸಂಸ್ಥೆಯ ಸಭಾಂಗಣದಲ್ಲಿ ನಡೆಯಿತು.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ ಪ್ರತಿಷ್ಠಾನದ ಚಟುವಟಿಕೆಗಳಿಗೆ ದೇವನಹಳ್ಳಿ ಸಮೀಪದ ಹೆಗ್ಗನಹಳ್ಳಿಯಲ್ಲಿ ರಿಯಾಯಿತಿ ದರದಲ್ಲಿ ಭೂಮಿ ಮಂಜೂರು ಮಾಡಿದ ಬೊಮ್ಮಾಯಿ ನೇತೃತ್ವದ ಸರಕಾರಕ್ಕೂ ತಮ್ಮ ಅಧಿಕಾರಾವಧಿಯಲ್ಲಿ ಅನುದಾನ ನೀಡಿದ ಮಾಜಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರಿಗೂ ಧನ್ಯವಾದಗಳನ್ನು ತಿಳಿಸಿದರು. ಪ್ರತಿಷ್ಠಾನದ ಚಟುವಟಿಕೆಗಳ ವರದಿಯನ್ನು ಶ್ರೀ ಟಿ ಎಸ್ ಗೋಪಾಲ್, ಶ್ರೀಮತಿ ಐಶ್ವರ್ಯಾ ಅನಂತಕುಮಾರ್ ಮತ್ತು ಶ್ರೀ ಜಿ ಎಂ ಇನಾಂದಾರ್ ಪ್ರಸ್ತುತ ಪಡಿಸಿದರು. ಅನೇಕ ಹಿರಿಕಿರಿಯರು ಸಭೆಯಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಸಭೆಯ ಅಧ್ಯಕ್ಷತೆಯನ್ನು ಪ್ರತಿಷ್ಠಾನದ ಅಧ್ಯಕ್ಷ, ಪ್ರೊ. ಪಿ. ವಿ. ಕೃಷ್ಣಭಟ್ಟರು ವಹಿಸಿದ್ದರು.



## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಜುಲೈ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ: ಮಧ್ಯಾಹ್ನ 2.00 ರಿಂದ 3.00 | 4,500 | 1,52,100 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ: ಮಧ್ಯಾಹ್ನ 12.30 ರಿಂದ 1.30 | 3,000 | 99,500 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ: ಮಧ್ಯಾಹ್ನ 12.30 ರಿಂದ 1.30 | 3,000 | 80,700 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು: ಮಧ್ಯಾಹ್ನ 12.30 ರಿಂದ 1.30 | 4,500 | 34,050 |
| 5 | ಅನಂತ ಪ್ರೇರಣಾ ಕೇಂದ್ರ, ಸೌಂತ್ ಎಂಡ್ ವೃತ್ತ: ಮಧ್ಯಾಹ್ನ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 1,240 | 17,080 |
| | **ಒಟ್ಟು ಅಂದಾಜು** | **16,240** | **3,83,430** |

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )





ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಇತ್ತೀಚೆಗೆ ನವದೆಹಲಿಯಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುಟುಂಬ ಸಮೇತ ಭೇಟಿ ಮಾಡಿದರು.



ಭಾರತದ ಲಘು ಯುದ್ಧ ವಿಮಾನಗಳ ಯೋಜನೆಯ ನಿವೃತ್ತ ನಿರ್ದೇಶಕ ಕೋಟಾ ಹರಿನಾರಾಯಣ್, ಜಿತೇಂದ್ರ ಜಾಧವ್, ಶಂಕರಯ್ಯ ಮಾಡ, ಬಿಜು ಉತಪ್, ಡಾ. ಡಿ. ಸೀತಾರಾಮ ರಾಜು, ಕೆ. ನಾಗರಾಜು ಮತ್ತಿತರರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದರು.



ಗುರು ಪೂಜೆ ಉತ್ಸವ ಅಂಗವಾಗಿ ಅದಮ್ಯ ಚೇತನ ಸಂಸ್ಥೆಯಲ್ಲಿ ಬೆಂಗಳೂರಿನ ರಾಷ್ಟ್ರ ಸೇವಿಕಾ ಸಮಿತಿಯು ವಿಶೇಷ ಸಮಾರಂಭ ಹಮ್ಮಿಕೊಂಡಿತ್ತು. ರಂಗಕಲಾವಿದೆ ಶ್ರೀಮತಿ ಸುಧಾ ಪ್ರಸನ್ನ, ಶಾರದಾ ಮೂರ್ತಿ, ಮೇಘಾ ಪ್ರಮೋದ್ ಮುಂತಾದವರು ಭಾಗವಹಿಸಿದ್ದರು.



ಅದಮ್ಯ ಚೇತನ ಸಂಸ್ಥೆ, ವಾಸವಿ ಸೇವಾ ಸಮಿತಿ ಹಾಗೂ ಸಮಾನ ಮನಸ್ಕ ಗೆಳೆಯರ ಬಳಗದ ಸಹಯೋಗದೊಂದಿಗೆ ಕೋಲಾರದ ಅಂತರಗಂಗೆಯಲ್ಲಿ 06/08/23 ರಂದು 397 ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಬೆಂಗಳೂರಿನ ಎಚ್.ಎಸ್.ಆರ್. ಲೇಔಟ್‌ನಲ್ಲಿರುವ ಆಕ್ಸ್‌ಫರ್ಡ್ ಮಹಾವಿದ್ಯಾಲಯದ ಕಾಲೇಜಿನ ಸಭಾಂಗಣದಲ್ಲಿ ಆಗಸ್ಟ್ ತಿಂಗಳ 'ಚಿಣ್ಣರ ಚೇತನ' ಗೋಡೆಪತ್ರಿಕೆಯನ್ನು 11/08/23 ರಂದು ಬಿಡುಗಡೆ ಗೊಳಿಸಲಾಯಿತು.




ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಶ್ರೀ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರು ಇತ್ತೀಚೆಗೆ ಅದಮ್ಯ ಚೇತನಕ್ಕೆ ಭೇಟಿಕೊಟ್ಟು ಆಶೀರ್ವಚನ ನೀಡಿದರು.



ಅದಮ್ಯ ಚೇತನದ 398 ನೇ ಹಸಿರು ಭಾನುವಾರ ಕಾರ್ಯಕ್ರಮವು 13/08/23 ರಂದು ಕೆಂಗೇರಿ ಬಳಿ ಇರುವ ವಿಶ್ವ ಒಕ್ಕಲಿಗರ ಮಹಾಸಂಸ್ಥಾನಮಠದ ಆವರಣದಲ್ಲಿ ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮಿಜೀ ಅವರ ನೇತೃತ್ವದಲ್ಲಿ ಜರುಗಿತು. ಅದಮ್ಯ ಚೇತನದ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಕಿರಿಯ ಸ್ವಾಮೀಜಿಗಳಾದ ಶ್ರೀ ರಮಣಾನಂದನಾಥ ಸ್ವಾಮಿಜೀ, ಜಪಾನಿನ ಟೊರು ಹೊಮ್ಮ, ಪುತ್ರ ಕೈಟಾ ಹೊಮ್ಮ ಹಾಗೂ ಸಂಸ್ಥೆಯ ಸ್ವಯಂ ಸೇವಾ ಕಾರ್ಯಕರ್ತರು, ಮೊದಲಾದವರು ಭಾಗಿಯಾಗಿದ್ದರು.

## ಅನಂತ ಚಿತ್ರಸಂಪುಟ

ನಾಡು - ನುಡಿ - ಸಂಸ್ಕೃತಿಗಳಿಗೆ ಸಂಬಂಧಿಸಿದ ಸಮಾರಂಭಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದ ಅನಂತಕುಮಾರರು ಸಾಮಾಜಿಕ ಸಾಮರಸ್ಯದ ಬಗ್ಗೆ ಕಾಳಜಿ ವಹಿಸುತ್ತಿದ್ದರು.















